ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

# ಸಹಕಾರಿ ಸಂಸ್ಥೆಗೆ ಸಿಬ್ಬಂದಿ ಹೊರೆಯಾಗದೇ ಆಸ್ತಿಯಾಗಬೇಕು – ಗುರುನಾಥ ಜ್ಯಾಂತೀಕರ್

## ಗಂಗಾವತಿಯ - ಕಾರಟಗಿಯಲ್ಲಿ ನಡೆದ 'ವೃತ್ತಿಪರ ಆಡಳಿತ, ಗ್ರಾಹಕ ಸಂಬಂಧ ನಿರ್ವಹಣೆ ತರಬೇತಿ'





ಸಹಕಾರಿ ರಂಗದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ವೇತನ, ಸೌಲಭ್ಯಗಳತ್ತ ದೃಷ್ಟಿ ಹರಿಸದೇ ತಮ್ಮ ಕಾರ್ಯಕ್ಷಮತೆಯಿಂದ ಸಂಸ್ಥೆಗೆ ಅಧಿಕ ಆದಾಯ ತಂದುಕೊಡುವಂತಾಗಬೇಕು. ಅಂತೆಯೇ ಸಂಸ್ಥೆಗೆ ಸಿಬ್ಬಂದಿ ಹೊರೆಯಾಗದೇ, ಆಸ್ತಿಯಾಗಬೇಕು ಎಂದು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಗುರುನಾಥ ಜ್ಯಾಂತೀಕರ್ ಕಿವಿಮಾತು ಹೇಳಿದರು.

ಗಂಗಾವತಿಯ ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ. ಹಾಗೂ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಯುಕ್ತಾಶ್ರಯದಲ್ಲಿ ಅ.10ರಂದು ಎಲ್‌ವಿಟಿ ತೋಂಟದಾರ್ಯ ತಪೋವನದಲ್ಲಿ ನಡೆದ 'ವೃತ್ತಿಪರ ಆಡಳಿತ, ಗ್ರಾಹಕ ಸಂಬಂಧ ನಿರ್ವಹಣೆ ತರಬೇತಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಫ್‌ಡಿಐನಿಂದ ಎಲ್ಲ ಕ್ಷೇತ್ರದ ವ್ಯವಹಾರದ ಜೊತೆಗೆ ವಕೀಲರಿಗೆ, ಎಂಜಿನಿಯರಗಳಿಗೆ, ವೈದ್ಯರಿಗೆ ತೊಂದರೆಯಾಗಲಿದೆ. ಸಹಕಾರಿ ಕ್ಷೇತ್ರ ಇದರ ಸದುಪಯೋಗ ಮಾಡಿಕೊಂಡು ಸೂಪರ್ ಬಜಾರ್ ಮೊದಲಾದ ಕ್ಷೇತ್ರವನ್ನು ಸುಲಭವಾಗಿ ಪ್ರವೇಶಿಸಬಹುದು ಎಂದರು.

ನಂತರ ಪ್ರಾಸ್ತಾವಿಕ ಭಾಷಣ ಭಾಷಣ ಮಾಡಿದ ಸಹಕಾರ ಭಾರತಿಯ ಅಧ್ಯಕ್ಷ ಶ್ರೀ ವಿಜಯಕುಮಾರ ರಾಯಕರ್ ಸಹಕಾರ ರಂಗದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಇಂತಹ ತರಬೇತಿ ಕಾರ್ಯಕ್ರಮದಿಂದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಅಂಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ.ಸಣ್ಣಸೂಗಪ್ಪ ವಹಿಸಿದ್ದರು. ವಿಕಾಸ ಬ್ಯಾಂಕಿನ ವಿಶ್ವನಾಥ ಹಿರೇಮಠ, ಶ್ರೀ ಭುವನೇಶ್ವರಿಯ ಸುಭಾಸ್ ಚಂದ, ಎಲ್‌ವಿಟಿಯ ಹನುಮಂತ ಸಾಲೋಣಿ, ಸಂಜಯ ಕೋರಟ್ಕರ್ ಹಾಗೂ ಕೊಪ್ಪಳ ಜಿಲ್ಲಾ ಯೂನಿಯನ್ ಅಧ್ಯಕ್ಷರಾದ ಶೇಖರಗೌಡ ಮಾಲಿ ಪಾಟೀಲ್ ಮತ್ತು ಶ್ರೀ ಭುವನೇಶ್ವರಿಯ ಗುರುರಾಜ ಬಿಸರಳ್ಳಿ ಹಾಗೂ ಎಲ್ ವಿ ಟಿಯ ಶ್ರೀ ಬಿ. ಶರಣಪ್ಪ ಉಪಸ್ಥಿತರಿದ್ದರು.

**Leader of Leaders - KarnataKa state souharda federaL Co-op-Ltd BangaLore**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ನಂ. ಡಿ–02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್–ಲಕ್ ಹೋಟೆಲ್ ಎದುರು, ಖುಬಾ ಪ್ಲಾಟ್, ಗುಲಬರ್ಗಾ– 585103. ದೂ;08472–270222, ಮೊ : 9900990268

ಅಕ್ಟೋಬರ್ – 2012

# ಸ್ವಾಭಿಮಾನಿ ಸಹಕಾರಿ

ಅಂತರರಾಷ್ಟ್ರೀಯ
ಸಹಕಾರಿಗಳ ವರ್ಷ – 2012

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಗಾಂಧಿಜಯಂತಿ
ಶುಭಾಶಯಗಳು

ಸಂಪುಟ 10 * ಸಂಚಿಕೆ 10 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/– * ಪುಟಗಳು 20



ಯಾ ಕುಂದೇಂದು ತುಷಾರಹಾರಧವಳಾ ಯಾ ಶುಭ್ರವಸ್ತ್ರಾವೃತಾ
ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ ।
ಯಾ ಬ್ರಹ್ಮಾಚ್ಯುತ ಶಂಕರಪ್ರಭೃತಿಭಿರ್ದೇವೈಸ್ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥

## ನಾಡ ಹಬ್ಬ ದಸರಾ ಹಾಗೂ ನವರಾತ್ರಿ ಹಬ್ಬದ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 2230 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 473



# ಸಂವಿಧಾನದ 97ನೇ ತಿದ್ದುಪಡಿ : ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ, ಸದಸ್ಯರಿಗೆ ಪೂರ್ಣ ಜವಾಬ್ದಾರಿ : ಸೀಮಿತಗೊಂಡ ಸರಕಾರದ ಪಾತ್ರ

**ಸಂವಿಧಾನದ 97ನೇ ತಿದ್ದುಪಡಿಗಳನ್ನು ಎಲ್ಲ ರಾಜ್ಯ ಸರಕಾರಗಳು ತಮ್ಮ ರಾಜ್ಯದ ಸಹಕಾರ ಕಾಯ್ದೆಗಳಲ್ಲಿ ಅಳವಡಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಈಗ ಒದಗಿದೆ. ರಾಜ್ಯ ಸರಕಾರಗಳು ಈ ತಿದ್ದುಪಡಿಯನ್ನು ಅಳವಡಿಸದಿದ್ದರೆ 13 ಫೆಬ್ರವರಿ 2013 ತಾನೇತಾನಾಗಿ ಈ ತಿದ್ದುಪಡಿಗಳು ಜಾರಿಗೆ ಬಂದುಬಿಡುತ್ತವೆ.**

ಸಹಕಾರ ಕ್ಷೇತ್ರದ 108 ವರ್ಷಗಳ ಸುದೀರ್ಘ ಪಯಣದಲ್ಲಿ 2011ನೇಯ ವರ್ಷ ಒಂದು ಮೈಲಿಗಲ್ಲು. ಕೇಂದ್ರ ಸರಕಾರ ಸಂವಿಧಾನದ ತಿದ್ದುಪಡಿಯ ಮುಖಾಂತರ ಸಹಕಾರ ಕ್ಷೇತ್ರವೊಂದು ಆರ್ಥಿಕ ವ್ಯವಸ್ಥೆಯೆಂದು ಪರಿಗಣಿಸಿ ಇದರ ಅಭಿವೃದ್ಧಿಗೆ ಅವಶ್ಯಕವಿರುವ ಸ್ವಾಯತ್ತತೆಯನ್ನು ಗಮನಿಸಿರುವುದು ಅತ್ಯಂತ ಮಹತ್ವದ ವಿಷಯ. ಇದರಿಂದಾಗಿ ಸರಕಾರದ ಹಸ್ತಕ್ಷೇಪಕ್ಕೆ ಕಡಿವಾಣ, ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ ಹಾಗೂ ಸದಸ್ಯರಿಗೆ ಪೂರ್ಣಜವಾಬ್ದಾರಿ ನೀಡಿರುವುದು ಸ್ವಾಗತಾರ್ಹ. ಸಹಕಾರಿಗಳ ಅನೇಕ ವರ್ಷಗಳ ಸ್ವಾಯತ್ತತೆಯ ಬೇಡಿಕೆಯನ್ನು ಈ ತಿದ್ದುಪಡಿಯ ಮೂಲಕ ಪುರಸ್ಕರಿಸಿದೆ.

ಸಹಕಾರಿಗಳು ಗಮನಿಸಬೇಕಾದ ಒಂದು ಮಹತ್ವದ ವಿಷಯವೆಂದರೆ ತಿದ್ದುಪಡಿಯ ಮೂಲಕ ಅಳವಡಿಸಲಾಗಿರುವ ವಿಷಯಗಳು ಕೇಂದ್ರ ಸರಕಾರ ಸೂಚನೆಯಂತೆ ಪ್ರಕಾರ ಕೇಂದ್ರ ಯೋಜನಾ ಆಯೋಗದ ಮಾದರಿ ಕಾಯ್ದೆಯನ್ನು 15 ವರ್ಷಗಳ ಹಿಂದೆಯೇ ಕರ್ನಾಟಕ ಸರಕಾರ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲಕ ಅನುಷ್ಠಾನಗೊಳಿಸಿರುವುದು ಕರ್ನಾಟಕ ರಾಜ್ಯಕ್ಕೆ ರಾಜ್ಯದ ಸಹಕಾರಿ ನಾಯಕರಿಗೆ ಹಾಗೂ ಸಹಕಾರ ಇಲಾಖೆಗೆ ಸಂದ ಗೌರವವಾಗಿದೆ. ಇತರೆ ರಾಜ್ಯಗಳಲ್ಲಿ ಕೇಂದ್ರದ ಮಾದರಿ ಕಾಯ್ದೆಯನ್ನು ಜಾರಿಗೊಳಿಸದಿರುವುದೇ ಕೇಂದ್ರವು ಸಂವಿಧಾನಕ್ಕೆ ತಿದ್ದುಪಡಿಯ ಮೂಲಕ ಕ್ರಮವಿಟ್ಟಿರುವುದು ದೇಶದ ಸಮಗ್ರ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದಿಟ್ಟ ಹೆಜ್ಜೆ ಎಂದು ವ್ಯಾಖ್ಯಾನಿಸಬಹುದು.

ಸಂವಿಧಾನದ 97ನೇ ತಿದ್ದುಪಡಿಗಳನ್ನು ಎಲ್ಲ ರಾಜ್ಯ ಸರಕಾರಗಳು ತಮ್ಮ ರಾಜ್ಯದ ಸಹಕಾರ ಕಾಯ್ದೆಗಳಲ್ಲಿ ಅಳವಡಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಈಗ ಒದಗಿದೆ. ರಾಜ್ಯ ಸರಕಾರಗಳು ಈ ತಿದ್ದುಪಡಿಯನ್ನು ಅಳವಡಿಸದಿದ್ದರೆ 13 ಫೆಬ್ರವರಿ 2013 ತಾನೇತಾನಾಗಿ ಈ ತಿದ್ದುಪಡಿಗಳು ಜಾರಿಗೆ ಬಂದುಬಿಡುತ್ತವೆ. ಹೀಗಾಗಿ ಕರ್ನಾಟಕ ರಾಜ್ಯ ಸರಕಾರವೂ ಸಹ ಈ ನಿಟ್ಟಿನಲ್ಲಿ ಕ್ರಮವಿಡಲು ಮುಂದಾಗಿರುವುದು ಸ್ವಾಗತಾರ್ಹ. ರಾಜ್ಯದ ಎರಡೂ ಸಹಕಾರಿ ಕಾಯ್ದೆಗಳಿಗೆ ಅಳವಡಿಸಬೇಕಿರುವ ಸಂವಿಧಾನದ 97 ನೇ ತಿದ್ದುಪಡಿಯ ವಿಷಯಗಳ ಬಗ್ಗೆ ಈಗಾಗಲೇ ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ, ರಾಜ್ಯದ ಹಿರಿಯ ಸಹಕಾರಿ ಮುಖಂಡರ ಜೊತೆಗೆ ಹಾಗೂ ಅಧಿಕಾರಿಗಳ ಹಂತದಲ್ಲಿ ಅನೇಕ ಸುತ್ತಿನ ಚರ್ಚೆಗಳು ಪ್ರಾರಂಭವಾಗಿವೆ. ಸಧ್ಯದಲ್ಲಿಯೇ ಈ ತಿದ್ದುಪಡಿಗಳಿಗೆ ಒಂದು ಅಂತಿಮ ಸ್ವರೂಪ ಬರಲಿದೆ.

ಈ ತಿದ್ದುಪಡಿಗಳ ಪ್ರಕಾರ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸುವುದು ಸಂವಿಧಾನಾತ್ಮಕ ಹಕ್ಕು ಎಂದು ಹೇಳಿದೆ. ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆ 21ಕ್ಕೆ ಮೀರುವಂತಿಲ್ಲ. ಇಬ್ಬರಿಗೆ ಮೀರದಂತೆ ತಜ್ಞರನ್ನು ಕೋ-ಆಪ್ಟ ಮಾಡಿಕೊಳ್ಳಲು ಅವಕಾಶ. ಆಡಳಿತ ಮಂಡಳಿಯಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಹಾಗೂ ಎರಡು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕಾಗುತ್ತದೆ. ಆಡಳಿತ ಮಂಡಳಿಯ ಚುನಾವಣೆಯನ್ನು ರಾಜ್ಯ ಚುನಾಣಾ ಆಯೋಗದ ಮಾದರಿಯಲ್ಲಿ ಸಹಕಾರ ಚುನಾವಣಾ ಆಯೋಗ ರಚನೆ ಮಾಡಿ ತನ್ಮೂಲಕವೇ ಚುನಾವಣೆಯು ನಡೆಯಬೇಕು. ಚುನಾವಣೆಗಳನ್ನು ಯಾವುದೆ ಕಾರಣದಿಂದ ಯಾರಿಗೂ ಮುಂದೂಡುವ ಅಧಿಕಾರವು ಇರುವುದಿಲ್ಲ. ಆಡಳಿತ ಮಂಡಳಿಯವರ ಅಧಿಕಾರದ ಅವಧಿ 5 ವರ್ಷಗಳು. ಪದಾಧಿಕಾರಿಗಳ ಚುನಾವಣೆಯನ್ನೂ ಸಹ ಸಹಕಾರಿ ಚುನಾವಣಾ ಆಯೋಗ ನಿರ್ವಹಿಸುತ್ತದೆ. ಪಧಾಧಿಕಾರಿಗಳ ಅವಧಿಯೂ 5ವರ್ಷಗಳು. ಲೆಕ್ಕ ಪರಿಶೋಧನೆಯನ್ನು ಲೆಕ್ಕಪರಿಶೋಧಕರ ಪಟ್ಟಿಯಿಂದಲೆ ಸಹಕಾರಿ ಸಂಸ್ಥೆಗಳು ಆಯ್ಕೆಮಾಡಿ ನೇಮಕ ಮಾಡಿದ ಲೆಕ್ಕ ಪರಿಶೋಧಕರಿಂದ ನಡೆಯಬೇಕು. ಸೆಪ್ಟೆಂಬರ 30 ರ ಒಳಗಾಗಿ ಲೆಕ್ಕ ಪರಿಶೋಧನೆಯಾಗಿ ವಾರ್ಷಿಕ ಸಾಮಾನ್ಯ ಸಭೆ ನಡೆದು ನಿಬಂಧಕರಿಗೆ ವರದಿ ಸಲ್ಲಿಸಬೇಕಾಗುತ್ತದೆ. ಇದರಂತೆ ಇನ್ನೂ ಕೆಲವು ಪ್ರಮುಖ

# ತೇಜಿಯತ್ತ ಷೇರು ಮಾರುಕಟ್ಟೆ



ಆಗಸ್ಟ್ ತಿಂಗಳ ನಂತರ ಸ್ಥಿರತೆಯತ್ತ ಹೊರಳಿದ್ದ ಷೇರು ಮಾರುಕಟ್ಟೆ ಕಳೆದ ತಿಂಗಳಿನಲ್ಲಿ ಉತ್ತಮ ಜಿಗಿತ ಕಂಡಿದೆ. ನಂತರ ಸೂಚ್ಯಂಕ ಸಮಾಧಾನಕರವಾದ 17 ಸಾವಿರದ ಗಡಿ ದಾಟಿ ಹತ್ತು ದಿನಗಳಲ್ಲಿ ಏರುಗತಿ ಸಾಗಿದೆ. ಈಗ ಷೇರು ಪೇಟೆ ಸಂವೇದಿ ಸೂಚ್ಯಂಕ 18762 ಅಂಶಗಳನ್ನು ಮುಟ್ಟಿ 19058 ಏರಿಕೆ ಕಂಡಿದೆ. ಕಳೆದ 15 ತಿಂಗಳಲ್ಲಿ ಇದು ದಾಖಲೆಯ ಏರಿಕೆ.

ಸದ್ಯಕ್ಕೆ ಈ ಚೇತರಿಕೆಯ ಓಟ ಮುಂಬರುವ ದಿನಗಳಲ್ಲಿ ಮತ್ತಷ್ಟು ಚುರುಕುಗೊಳ್ಳುವ ಸಾಧ್ಯತೆಗಳಿವೆ. ಇದಕ್ಕೆ ಕಾರಣ ಇಳಿ ಮುಖಹಾದಿಯಲ್ಲಿದ್ದ ರೂಪಾಯಿ ತನ್ನ ಮೌಲ್ಯ ಹೆಚ್ಚಿಸಿಕೊಂಡು ಡಾಲರ್ ಎದುರು ಸೆಟದು ನಿಂತಿರುವುದು ಒಂದು ಕಾರಣವಾದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಯುತ್ತಿರುವುದು. ತೈಲ ಬೆಲೆ ಇಳಿಕೆಯಿಂದ ನಮ್ಮ ದೇಶದ ವಿದೇಶಿ ವಿನಿಮಯ ಸಂಗ್ರಹ ಹೆಚ್ಚಾಗಿ ಹಣದುಬ್ಬರದ ಆತಂಕ ದೂರವಾಗಿರುವುದು ಮತ್ತೊಂದು ಕಾರಣ.

ಇವೆಲ್ಲಕ್ಕಿಂತ ಹೆಚ್ಚಾಗಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಇಲ್ಲಿನ ಹೂಡಿಕೆಯಲ್ಲಿ ಹೆಚ್ಚು ಸಕ್ರೀಯರಾಗಿರುವುದು ಕಂಡು ಬರುತ್ತಿದೆ. ಕಳೆದೊಂದು ತಿಂಗಳಿನಲ್ಲಿ ವಿದೇಶಿ ಹೂಡಿಕೆ 19 ಸಾವಿರ ಕೋಟಿ ರೂಪಾಯಿಷ್ಟು ಹೆಚ್ಚಾಗಿದೆ. ಕೇಂದ್ರ ಸರ್ಕಾರ ಮುಂಬರುವ ದಿನಗಳಲ್ಲಿ ಮತ್ತಷ್ಟು ಉದ್ಯಮ ಉತ್ತೇಜನಕಾರಿ ಆರ್ಥಿಕ ನೀತಿಗಳನ್ನು ಪ್ರಕಟಿಸಲಿದೆ ಎಂಬ ಸುಳಿವಿನ ಹಿನ್ನೇಲೆಯಲ್ಲಿ ಇನ್ನೂ ಹೆಚ್ಚಿನ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಇಲ್ಲಿನ ಷೇರು ಪೇಟೆಯತ್ತ ಮುನ್ನುಗ್ಗಬಹುದು.

ಇನ್ನೊಂದೆಡೆ ದೇಶದ ಕಾರ್ಪೋರೇಟ್ ಕಂಪನಿಗಳು ತಮ್ಮ ಎರಡನೇ ತ್ರೈಮಾಸಿಕ ವರದಿಯನ್ನು ಇದೇ ತಿಂಗಳಿನಲ್ಲಿ ಪ್ರಕಟಿಸವೆ ಹಾಗೂ ಆರ್.ಬಿ.ಐ ಕೂಡ ತನ್ನ ಮುಂದಿನ ತ್ರೈಮಾಸಿಕ ಹಣಕಾಸು ಪರಾಮರ್ಶೆಯನ್ನು ಪ್ರಕಟಿಸಲಿರುವುದು ಷೇರು ಮಾರುಕಟ್ಟೆಗೆ ಹೆಚ್ಚಿನ ತೇಜಿ ತರಲಿದೆ. ಒಟ್ಟಿನಲ್ಲಿ ಸಂವೇದಿ ಸೂಚ್ಯಂಕ ಮತ್ತಷ್ಟು ಏರಿಕೆಯಾಗುವ ಸಂಭವವಿದೆ. ಇದೆಲ್ಲದರಿಂಗ ಹೂಡಿಕೆದಾರರು ಜೇಬು ತುಂಬಿ ಕೊಳ್ಳುವ ಸಮಯ!

## ಸಣ್ಣ ಹೂಡಿಕೆಗೆ ಸರಳ ಡಿಮ್ಯಾಟ್ ಖಾತೆ



ದೇಶದಲ್ಲಿ ಸಣ್ಣ ಹೂಡಿಕೆದಾರರನ್ನು ಉತ್ತೇಜಿಸುವ ದೃಷ್ಟಿಯಿಂದ ಅಕ್ಟೋಬರ್‌ನಿಂದ ಸರಳ ಡಿಮ್ಯಾಟ್ ಖಾತೆ ತೆರೆಯಲು ಬ್ಯಾಂಕುಗಳು ಅವಕಾಶ ಕಲ್ಪಿಸಿವೆ. ಇದರಿಂದ 50 ಸಾವಿರ ರೂಗಳನ್ನು ಷೇರುಪೇಟೆ, ಮ್ಯೂಚುಯಲ್ ಫಂಡ ಹಾಗೂ ಇತರೆ ಸೆಕ್ಯೂರಿಟಿಗಳಲ್ಲಿ ತೊಡಗಿಸುವವರು ಯಾವುದೇ ನಿರ್ವಹಣ ಶುಲ್ಕವಿಲ್ಲದೆ ವಹಿವಾಟು ನಡೆಸಬಹುದು. 50 ಸಾವಿರ ರೂಗಳಿಗೂ ಷೇರುಪೇಟೆ ಹೆಚ್ಚು ವಾರ್ಷಿಕ 2 ಲಕ್ಷ ರೂ. ವಹಿವಾಟು ನಡೆಸುವವರಿಗೆ ಗರಿಷ್ಟ 100ರೂಪಾಯಿ ಶುಲ್ಕ ವಿಧಿಸಲಾಗುತ್ತದೆ.

ನಮ್ಮ ದೇಶದಲ್ಲಿರುವ ಬೃಹತ್ ಪ್ರಮಾಣದ ಸಣ್ಣ ಹೂಡಿಕೆದಾರರು ವಿವಿಧ ಹೂಡಿಕೆಗಳಲ್ಲಿ ತಮ್ಮ ಹಣವನ್ನು ಹರಿಯ ಬಿಟ್ಟರೆ ಮಾರುಕಟ್ಟೆಗೆ ಬಾರಿ ಪ್ರವಾಹವೇ ಉಂಟಾಗಬಹುದು! ಇದೊಂದು ಸೆಬಿ ತೆಗೆದುಕೊಂಡ ಉತ್ತಮ ಕಾರ್ಯವೆನ್ನಬಹುದು. ಬ್ಯಾಂಕಗಳಲ್ಲಿ ಈ ಖಾತೆ ತೆರೆಯಲು ಖಾತೆದಾರರು ಪಾನ್ ಕಾರ್ಡ್ ಹೊಂದಿರುವುದು ಖಡ್ಡಾಯ.

## ಗಾರ್‌ಗೆ ತಿದ್ದುಪಡಿ

ಪ್ರಣಬ್ ಮುಖರ್ಜಿ ಕೇಂದ್ರ ವಿತ್ತ ಸಚಿವರಾಗಿದ್ದಾಗ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಹೆಸರಿನಲ್ಲಿ ನಡೆಯುತ್ತಿರುವ ತೆರಿಗೆ ವಂಚನೆ ತಡೆಗಟ್ಟುವ ನಿಟ್ಟಿನಲ್ಲಿ ಗಾರ್ (GAAR) ಕಾಯ್ದೆ ಜಾರಿಗೊಳಿಸಲು ಯೋಜಿಸಿದ್ದರು. ಇದರಿಂದ ಆತಂಕಗೊಂಡ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಮಾರುಕಟ್ಟೆಯಿಂದ




ತಮ್ಮ ಹೂಡಿಕೆ ಹಿಂತೆಗೆದುಕೊಂಡ ಪರಿಣಾಮ ಷೇರುಮಾರುಕಟ್ಟೆಯಲ್ಲಿ ಕುಸಿತ ಕಂಡು ಬಾರಿ ತಲ್ಲಣ ಉಂಟು ಮಾಡಿತ್ತು. ಪ್ರಧಾನಿ ಮನ ಮೋಹನ್ ಸಿಂಗ್ ನಂತರ ಈ ಗಾರ್ ಕಾಯ್ದೆಯನ್ನು ತಡೆದಿದ್ದರ ಫಲವಾಗಿ ಷೇರು ಮಾರುಕಟ್ಟೆಯ ತಳಮಳ ದೂರವಾಗಿತ್ತು.

ಈಗ ವಿತ್ತ ಸಚಿವ ಪಿ. ಚಿದಂಬರಮ್ ಕೆಲ ನಿಯಮಾವಳಿಗಳನ್ನು ಸೂಕ್ತ ತಿದ್ದುಪಡಿಗಳೊಂದಿಗೆ ಮುಂಬರುವ ಸಂಸತ್ ಅಧಿವೇಶನದಲ್ಲಿ ಮಂಡಿಸುವುದಾಗಿ ತಿಳಿಸಿದ್ದಾರೆ. ಇದೆಲ್ಲವು ಅಂಗಿಕಾರಗೊಂಡು ಜಾರಿಗೊಳ್ಳಲು ಸಾಕಷ್ಟು ಸಮಯವಿರುವುದರಿಂದ ಸದ್ಯಕ್ಕೆ ಹೂಡಿಕೆದಾರರು ಆತಂಕಗೊಳ್ಳುವ ಅಗತ್ಯವಿಲ್ಲ.

# 80 ಪಿ ಸಹಕಾರ ಸಂಘಗಳ ಸಂಜೀವಿನಿ

ಸಹಕಾರ ಸಂಘಗಳು ಯಾರೊಬ್ಬರ ವೈಯಕ್ತಿಕ ಆಸ್ತಿಯಲ್ಲ. ಸಹಕಾರ ಸಂಘಗಳು ಸದಸ್ಯರಿಗಾಗಿ, ಸದಸ್ಯರಿಂದ, ಸದಸ್ಯರ ಸಾಮೂಹಿಕ ಸಂಪನ್ಮೂಲಗಳ ಸದ್ಬಳಕೆಯಿಂದ ಸದಸ್ಯರ ಸರ್ವತೋಮುಖ ಏಳಿಗೆಗಾಗಿ ಸಂಘಟಿಸಿದ ಸಂಸ್ಥೆಗಳು. ಸರ್ಕಾರ ನಿರ್ವಹಿಸಬೇಕಿದ್ದ ಸಾಂಘಿಕ ಕ್ರಿಯೆಯನ್ನು ಸಹಕಾರ ಸಂಘಗಳ ರೂಪದಲ್ಲಿ ಒಂದು ಗುಂಪಿನ ಸದಸ್ಯರು ಸ್ವಯಂ ಪ್ರೇರಿತರಾಗಿ ನಡೆಸುತ್ತಿರುವುದರಿಂದ ಇಂತಹ ಒಂದು ಸಾಮೂಹಿಕ ಚಟುವಟಿಕೆಯಲ್ಲಿ ಸಂಗ್ರಹವಾಗುವ ಸಂಪನ್ಮೂಲಕ್ಕೆ ಕ್ಕೂ ತೆರಿಗೆ ವಿಧಿಸಬಾರದು ಎಂಬ ಆಶಯವನ್ನು ಆಧರಿಸಿ ಆದಾಯ ತೆರಿಗೆಯಿಂದ ಸಹಕಾರಿ ಸಂಘಗಳಿಗೆ ವಿನಾಯಿತಿ ಕೊಡಲಾಗಿದೆ. ಸಹಕಾರಿ ಸಂಘಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡುವ ವಿಚಾರವನ್ನು ಆದಾಯ ತೆರಿಗೆ ಕಾನೂನಿನಡಿಯಲ್ಲಿ 80ಪಿ ಎಂಬ ಕಲಮಿನಲ್ಲಿ ಸ್ಪಷ್ಟಪಡಿಸಲಾಗಿದೆ.

ಆದಾಯ ತೆರಿಗೆ ಕಾನೂನಿನ ಪ್ರಕಾರ 80 ಪಿ ಹಲವಾರು ಷರತ್ತುಗಳನ್ನು ಒಳಗೊಂಡ ಸುದೀರ್ಘ ಕಲಂ ಆಗಿದ್ದು ಸಹಕಾರ ಸಂಸ್ಥೆಗಳನ್ನು ನಿರ್ವಹಿಸುವ ಆಡಳಿತ ಮಂಡಳಿ ಮತ್ತು ಸಂಬಂಧಪಟ್ಟ ಸಿಬ್ಬಂದಿಗೆ ಈ ಬಗ್ಗೆ ಸೂಕ್ತ ಮಾಹಿತಿ ಇರುವುದು ಅತ್ಯಂತ ಅವಶ್ಯ.

01–04–1968 ರಿಂದ ಜಾರಿಯಲ್ಲಿರುವ 80ಪಿ ಪ್ರಕಾರ ಸಹಕಾರ ಸಂಘಗಳ ಒಟ್ಟಾರೆ ಕಾರ್ಯವ್ಯಾಪ್ತಿಯನ್ನು ಗಮನದಲ್ಲಿರಿಸಿಕೊಂಡು ಅವುಗಳ ಚಟುವಟಿಕೆಗಳ ಆಧಾರದ ಮೇಲೆ ಹಲವು ಬಗೆಯ ಸಹಕಾರಿ ಸಂಘಗಳನ್ನು ಗುರುತಿಸಲಾಗಿದೆ. ಪತ್ತಿನ ಸಹಕಾರಿ ಸಂಘಗಳು, ಗುಡಿ ಕೈಗಾರಿಕೆಗಳು, ಕೃಷಿ ಉತ್ಪನ್ನ ಮಾರಾಟ ಸಂಘಗಳು, ವ್ಯವಸಾಯ ಸೇವಾ ಸಹಕಾರ ಸಂಘಗಳು, ಕೃಷಿ ಉತ್ಪನ್ನ ಸಂಸ್ಕರಣೆ ಸಂಘಗಳು, ಸ್ವ–ಸಹಾಯ ಸಹಕಾರ ಸಂಘಗಳು, ಮೀನುಗಾರಿಕೆ ಸೇವಾ ಸಹಕಾರ ಸಂಘಗಳು ಗಳಿಸಿದ ಆದಾಯದ ಮೇಲೆ ಸಂಪೂರ್ಣ ತೆರಿಗೆ ವಿನಾಯಿತಿಯನ್ನು ಪಡೆಯಲು ಅರ್ಹವಾಗಿವೆ. ಹಾಗೆಯೇ ಒಕ್ಕೂಟ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವ ಹಾಲು, ಎಣ್ಣೆಗಳು, ಹಣ್ಣು ಮತ್ತು ತರಕಾರಿ ಮಾರಾಟ ಸಹಕಾರ ಸಂಘಗಳು ಕೂಡ ತಾವು ಗಳಿಸಿರುವ ಲಾಭದ ಮೊತ್ತದ ಮೇಲೆ ಆದಾಯ ತೆರಿಗೆ ವಿನಾಯಿತಿಯನ್ನು ಪಡೆಯುತ್ತವೆ. ಬಳಕೆದಾರರ ಸಹಕಾರ ಸಂಘಗಳು ಮಾತ್ರ ಭಾಗಶ: ವಿನಾಯಿತಿ ಎಂದರೆ ತಮ್ಮ ಆದಾಯದ ಮೇಲೆ ಒಂದು ಲಕ್ಷ ರೂಪಾಯಿಗಳವರೆಗೆ ತೆರಿಗೆ ವಿನಾಯಿತಿ ಪಡೆಯುತ್ತವೆ. ವಸತಿ ನಿರ್ಮಾಣ ಸಹಕಾರ ಸಂಘಗಳು, ಪಟ್ಟಣ ಗ್ರಾಹಕರ ಸಹಕಾರ ಸಂಘಗಳು, ಸಾರಿಗೆ ಸಹಕಾರ ಸಂಘಗಳು ಮತ್ತು ಇತರೆ ಯಾವುದೇ ಉದ್ದೇಶದ ಸಹಕಾರ ಸಂಘಗಳು ತಮ್ಮ ಆದಾಯದ ಮೇಲೆ ವಾರ್ಷಿಕ ಐವತ್ತು ಸಾವಿರ ರೂಪಾಯಿಗಳ 80ಪಿ ವಿನಾಯಿತಿ ಪಡೆಯಲು ಮಾತ್ರ ಅರ್ಹವಾಗುತ್ತವೆ.



ಎಚ್. ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್

ಯಾವುದೇ ಸಂಘವು ಮತ್ತೊಂದು ಸಹಕಾರ ಸಂಘದಲ್ಲಿ ಹೂಡಿದ ಹಣದ ಮೇಲೆ ಗಳಿಸುವ ಬಡ್ಡಿ ಮತ್ತು ಲಾಭಾಂಶಗಳು ಪರಸ್ಪರತೆಯ ಆಧಾರದ ಮೇಲೆ ಸಂಪೂರ್ಣ ತೆರಿಗೆ ವಿನಾಯಿತಿ ಪಡೆಯುತ್ತವೆ. ಪ್ರಾಥಮಿಕ ಕೃಷಿ ಪತ್ತಿನ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಕೃಷಿಯಾಧಾರಿತ ಚಟುವಟಿಕೆಗಳಿಗೆ ಬೆಂಬಲ ನೀಡುವುದರಿಂದ 80ಪಿ ಪ್ರಕಾರ ಸಂಪೂರ್ಣ ತೆರಿಗೆ ವಿನಾಯಿತಿ ಪಡೆಯುತ್ತವೆ.

01–04–2007 ರವರೆಗೆ ಸಹಕಾರ ಬ್ಯಾಂಕುಗಳು ಸಹ ಸಂಪೂರ್ಣ ತೆರಿಗೆ ವಿನಾಯಿತಿಗೆ ಪಾತ್ರವಾಗಿದ್ದವು ತದನಂತರ ಬಂದ 80ಪಿ ತಿದ್ದುಪಡಿಯ ಫಲವಾಗಿ ಎಲ್ಲಾ ಸಹಕಾರಿ ಬ್ಯಾಂಕುಗಳೂ 80ಪಿ ವ್ಯಾಪ್ತಿಯಿಂದ ಹೊರಗುಳಿದಿದ್ದು ಯಾವುದೇ ವಾಣಿಜ್ಯ ಸಂಸ್ಥೆಗಳು ತೆರಿಗೆಗೆ ಗುರಿಯಾಗುವ ಮಾದರಿಯಲ್ಲೇ ಆದಾಯ ತೆರಿಗೆಗೆ ಒಳಗಾಗುತ್ತಿವೆ. ಪತ್ತಿನ ಸಹಕಾರಿ ಸಂಘಗಳು ಸಹ ಸಹಕಾರಿ ಬ್ಯಾಂಕುಗಳಂತೆ ಠೇವಣಿ ಸ್ವೀಕರಿಸುವ ಮತ್ತು ಸಾಲ ನೀಡುವ ವ್ಯವಹಾರಗಳನ್ನು ನಡೆಸುತ್ತಿರುವುದರಿಂದ ಅವುಗಳು ಕೂಡ 80ಪಿ ವ್ಯಾಪ್ತಿಯಿಂದ ಹೊರಗಿಡಬೇಕು ಎಂಬ ತರ್ಕದ ಮೇಲೆ ಇತ್ತೀಚೆಗೆ ಪತ್ತಿನ ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ವಿಧಿಸುವ ಪ್ರಕರಣಗಳು ಕಂಡು ಬರುತ್ತಿವೆ. ಇದು ವಿವಾದಗ್ರಸ್ತ ವಿಚಾರವಾಗಿ ಇಂದಿಗೂ ಉಳಿದುಬಿಟ್ಟಿದೆ. ಪ್ರಕರಣಗಳು ತೆರಿಗೆ ನ್ಯಾಯ ಮಂಡಳಿಗಳಲ್ಲಿ ವ್ಯಾಜ್ಯಗಳಾಗಿ ನಡೆಯುತ್ತಿವೆ. ಇಂತಹ ಹಲವು ಕಟ್ಟಳೆ ಸಂದೇಹ, ಅನುಮಾನ, ಜಿಜ್ಞಾಸೆಗಳ ನಡುವೆಯೂ 80ಪಿ ಎಂಬ ವಿನಾಯಿತಿ ಸಹಕಾರ ಸಂಘಗಳ ಪಾಲಿಗೆ ತೆರಿಗೆ ಎಂಬ ಮರಣ ಮೃದಂಗದ ಎದುರು ಸಂಜೀವಿನಿಯಂತೆ ಕೆಲಸ ಮಾಡುತ್ತಿದೆ. ಆದ್ದರಿಂದ ಸಹಕಾರ ಸಂಘಗಳು ಸೂಕ್ತ ರೀತಿಯಲ್ಲಿ ತಮ್ಮ ಲಾಭ ಲೆಕ್ಕಚಾರವನ್ನು ನಿರ್ವಹಿಸಿ 80ಪಿ ಪ್ರಕಾರ ಅನ್ವಯವಾಗುವ ತೆರಿಗೆ ವಿನಾಯಿತಿಯನ್ನು ಅವಶ್ಯಕವಾಗಿ ಬಳಸಿಕೊಂಡು ಆದಾಯ ತೆರಿಗೆಯಿಂದ ಕಾನೂನು ರೀತ್ಯ ಹೊರಗುಳಿಯುವ ಅವಕಾಶವಿದೆ.

80ಪಿ ಕಲಮಿನಡಿ ಐವತ್ತು ಸಾವಿರ ರೂಪಾಯಿಗಳಿಗೆ ಮಾತ್ರ ವಿನಾಯಿತಿಯನ್ನು ಹೊಂದುವ ಸಹಕಾರಿ ಸಂಘಗಳು ತಮ್ಮ ಹೆಚ್ಚುವರಿ ಲಾಭಾಂಶಕ್ಕೆ ತೆರಬೇಕಾದ ತೆರಿಗೆ ದರ ಇಂತಿದೆ. ಮೊದಲ ಹತ್ತು ಸಾವಿರ ರೂ. ಲಾಭಕ್ಕೆ ಶೇ 10, ನಂತರದ ಹತ್ತು ಸಾವಿರ ರೂ. ಲಾಭಕ್ಕೆ ಶೇ 20 ಮತ್ತು ಉಳಿದ ಹೆಚ್ಚುವರಿ ಲಾಭಕ್ಕೆ ಶೇ 30 ರಷ್ಟು ಆದಾಯ ತೆರಿಗೆ ಕೊಡಬೇಕಾಗುತ್ತದೆ. ಹೀಗೆ ತೆರಿಗೆ ಪರಿಧಿಯಲ್ಲಿ ಬರುವ ಸಹಕಾರ ಸಂಘಗಳು ಯಾವುದೇ ಇನ್ನಿತರ ವಾಣಿಜ್ಯ ಸಂಸ್ಥೆಗಳಂತೆ ತೆರಿಗೆ ಚಲನ್ ಮೂಲಕ ತೆರಿಗೆ ಪಾವತಿ ಮಾಡಬೇಕಾಗುತ್ತದೆ.

ಈ ರೀತಿ ಸಹಕಾರ ಸಂಘಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ, ಭಾಗಶ: ತೆರಿಗೆ ವಿನಾಯಿತಿ, ಕನಿಷ್ಠ ಐವತ್ತು ಸಾವಿರ ರೂಪಾಯಿಗಳ ವಿನಾಯಿತಿಯನ್ನು ಸಹಕಾರ ಸಂಘಗಳ ಚಟುವಟಿಕ್ಯ ಆಧಾರದ ಮೇಲೆ ನೀಡುವ ವ್ಯವಸ್ಥೆ 80ಪಿ ಎಂಬ ಕಲಮಿನ ಮೂಲಕ ಅಧಿಕೃತವಾಗಿ ಜಾರಿಯಲ್ಲಿದೆ. ಇಂತಹ ಒಂದು ವ್ಯವಸ್ಥೆಯನ್ನು ಇಡೀ ಸಹಕಾರ ಚಳುವಳಿಯ ಅಂತರ್ಯಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಹೊಸ ತೆರಿಗೆ ಕಾನೂನಿನಡಿ ಏಕಾಏಕಿ ರದ್ದು ಮಾಡುವ ಹುನ್ನಾರ ನಡೆದು ಹೋಗಿತ್ತು. ಸಹಕಾರಿ ರಂಗದಿಂದ 80ಪಿ ಎಂಬ ಆದಯ ತೆರಿಗೆ ವಿನಾಯಿತಿನ್ನು ರದ್ದುಮಾಡುವ ಹುನ್ನಾರ ನಡೆದುಹೋಗಿತ್ತು. ಸಹಕಾರಿ ರಂಗದಿಂದ 80 ಪಿ ಎಂಬ ಆದಾಯ ತೆರಿಗೆ ವಿನಾಯಿತಿಯನ್ನು ಅಪಹರಿಸುವ ಮತ್ತು ಸಹಕಾರ ರಂಗಕ್ಕೆ ನೇರವಾಗಿ ತೆರಿಗೆ ಹೇರುವಂತ ದುರದೃಷ್ಟಕರ ವಾತಾವರಣ ಎದುರಾಗಿತ್ತು. ಈಗ ನೇರ ತೆರಿಗೆ ಸಂಹಿತೆಯನ್ನು ಮುಂದಿನ ಎರಡು ವರ್ಷಗಳಿಗೆ ಮುಂದೂಡಿರುವುದರಿಂದ ಸದರಿ ಸಮಸ್ಯೆ ತಾತ್ಕಾಲಿಕ ವಾಗಿ ಬಗೆ ಹರಿದಂತಾರಿದೆ. ಮುಂದಿನ ದಿನಗಳಲ್ಲಿ ತನ್ನ ಹೊಸ ರೂಪದೊಂದಿಗೆ ಬರಲಿರುವ ತೆರಿಗೆ ಸಂಹಿತೆಯಲ್ಲಿ 80ಪಿ ತರಹದ ತೆರಿಗೆ ವಿನಾಯಿತಿಯ ಕಲಂ ಅವಶ್ಯಕವಾಗಿ ಇರತಕ್ಕದ್ದು. ಸಹಕಾರ ಸಂಘಗಳ ಸಂಜೀವಿನಿಯಂತಿರುವ 80ಪಿ ತರಹದ ತೆರಿಗೆ ವಿನಾಯಿತಿಯನ್ನು ಎಲ್ಲ ಕಾಲಕ್ಕೂ ಉಳಿಸಿಕೊಳ್ಳುವ, ಬಳಸಿಕೊಳ್ಳುವ ಮತ್ತು ಆ ಮೂಲಕ ಸಹಕಾರ ರಂಗವನ್ನು ಬೆಳೆಸಿಕೊಳ್ಳುವ ಹಕ್ಕು ಮತ್ತು ಆದ್ಯತೆಯನ್ನು ಒಟ್ಟಾರೆ ಸಹಕಾರಿ ರಂಗ ಸಾಮೂಹಿಕವಾಗಿ ಸಾದರಪಡಿಸಬೇಕಿದೆ. ■

ವಿಷಯಗಳಿಗೆ ತಿದ್ದುಪಡಿ ಜಾರಿಯಾಗುತ್ತದೆ. 1959 ರ ಸಹಕಾರ ಕಾಯ್ದೆಯಲ್ಲಿ ಸಾಕಷ್ಟು ಬದಲಾವಣೆಯಾಗ ಬೇಕಿದೆ. 1997 ರ ಸೌಹಾರ್ದ ಸಹಕಾರ ಕಾಯ್ದೆಗೆ ಅಷ್ಟು ಬದಲಾವಣೆಗಳು ಅವಶ್ಯಕವೆನಿಸುವುದಿಲ್ಲ ಆದಾಗ್ಯೂ ಕೆಲವುಗಳನ್ನು ಅಳವಡಿಸುವುದು ಅನಿವಾರ್ಯವೆನಿಸುತ್ತದೆ. ಈ ಅವಶ್ಯಕ ತಿದ್ದುಪಡಿಗಳನ್ನು ಮಾಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಮಾನ್ಯ ಸಹಕಾರ ಸಚಿವರ ನೇತೃತ್ವದಲ್ಲಿ ಹಾಗೂ ಅಧಿಕಾರಗಳ ನೇತೃತ್ವದಲ್ಲಿ ಹಲವು ಸುತ್ತಿನ ಸಭೆಗಳು ನಡೆಯುತ್ತಿವ. ಸಂಯುಕ್ತ ಸಹಕಆರಿಯು ಸಹ ಈ ಬಗ್ಗೆ ಚಿಂತನೆ ನಡೆಸಿ ಹಿರಿಯ ಸಹಕಾರಿಗಳು , ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಗಳ ಸಭೆ ನಡೆಸಲಾಗಿದೆ.

ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕುವ ಮೂಲಭೂತ ಹಕ್ಕು ನೀಡಿರುವ ಸಂವಿಧಾನ ಸಂಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಸಹ ಸದಸ್ಯರಿಗೆ ನೀಡಿರುವುದು ಗಮನಿಸಬೇಕಾದ ಮಹತ್ವದ ವಿಷಯ. ಮುಂಬರುವ ದಿನಗಳಲ್ಲಿ ಸದಸ್ಯರಿಗೆ ಈ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವಲ್ಲಿ ಸಹಕಾರಿ ಇಲಾಖೆಯಂತೆ ಸಂಯುಕ್ತ ಸಹಕಾರಿಯ ಜವಾಬ್ದಾರಿಯೂ ಹೆಚ್ಚಿನದಾಗಿದೆ. ಸೌಹಾರ್ದ ಸಹಕಾರಿಗಳೂ ಸಹ ಈ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವುದು ಅಗತ್ಯ.

**- ಎಸ್.ಆರ್. ಸತೀಶ್‌ಚಂದ್ರ**
ಅಧ್ಯಕ್ಷರು

# "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿ ಕಾರ್ಯಕ್ರಮ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕ್ಷೇತ್ರದ ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯದ್ಯಂತ ಹಮ್ಮಿಕೊಳ್ಳುತ್ತಲಿರುವುದು ತಮಗೆ ತಿಳಿದಿದೆ. ಪ್ರಸ್ತುತ ದಿನಾಂಕ : 10 ಮತ್ತು 11 ಅಕ್ಟೋಬರ್ 2012ರಂದು 2 ದಿನಗಳ ನಾಲ್ಕನೇ ತಂಡದ ತರಬೇತಿಯನ್ನು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ ಪದ್ಮನಾಭನಗರ ಬೆಂಗಳೂರಿನಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ, "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಿದೆ

# ವಿಶ್ವ ವಿದ್ಯಾಲಯ ಮಟ್ಟದಲ್ಲಿ ಸಹಕಾರ ಕುರಿತಾದ ಚರ್ಚಾಸ್ಪರ್ಧೆ

ಅಂತರ ರಾಷ್ಟ್ರೀಯ ಸಹಕಾರಿಗಳ ವರ್ಷ–2012ರ ಅಂಗವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಗಳ ಹಂತದಲ್ಲಿ ಹಾಗೂ ಅಂತರ ವಿಶ್ವವಿದ್ಯಾಲಯದಲ್ಲಿ ಸಹಕಾರ ಕುರಿತಾದ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವುದರ ಮೂಲಕ ಯುವ ಜನರಲ್ಲಿ ಸಹಕಾರ ಪ್ರಜ್ಞೆಯನ್ನು ಬೆಳೆಸಿ, ತನ್ಮೂಲಕ ರಾಜ್ಯದ ಸಹಕಾರಿ ಚಳುವಳಿಯನ್ನು ವಿಶೇಷವಾಗಿ ಸೌಹಾರ್ದ ಸಹಕಾರಿ ಚಳುವಳಿ ಬಲಪಡಿಸಲು ಕ್ರಮವಿಡಲಾಗುತ್ತಿದೆ.



## ಅನುಮತಿ ವಾಪಸ್

- ಉದ್ದೇಶಿತ ಋಷಿ ಸೌಹಾರ್ದ ಸಹಕಾರಿ ನಿ., ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ. ಇದರ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆದಿರುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ 1 ಅಲಿ ಆಸ್ಕರ್‌ರಸ್ತೆ, ಬೆಂಗಳೂರು–52 ದಿನಾಂಕ:05.09.2012ರ ಆರ್‌ಸಿ ಎಸ್ / ಸೌಹಾರ್ದ ಸ/246/2012–13ರ ಮೂಲಕ ತಿಳಿಸಲಾಗಿದೆ.
- ಉದ್ದೇಶಿತ ಸಿರಿಸಿಂಚನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕಳಸ. ಸದರಿ ಸಹಕಾರಿಯು ವ್ಯವಹಾರವನ್ನಾಗಲಿ, ಷೇರು ಸಂಗ್ರಹಣೆಯನ್ನಾಗಲಿ ಮಾಡತಕ್ಕದಲ್ಲವೆಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಎಆರ್–26/ಸಿ–4/ನೋಂದಣಿ/ಸೌ, ಸನೋಂ/2012–13 ಹಾಗೂ ವಿಶೇಷ ಕರ್ತವ್ಯಾಧಿಕಾರಿ, ಸಹಕಾರ ಇಲಾಖೆ ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ ಸಿಓ/355/ಸಿಎಲ್‌ಎಂ/2005. ದಿನಾಂಕ:12.04.2006 ಮೂಲಕ ಆದೇಶಿಸಲಾಗಿದೆ.
- ಉದ್ದೇಶಿತ ನಮಿತ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ. ಸದರಿ ಸಹಕಾರಿಯು ವ್ಯವಹಾರವನ್ನಾಗಲಿ, ಷೇರು ಸಂಗ್ರಹಣೆಯನ್ನಾಗಲಿ ಮಾಡತಕ್ಕದಲ್ಲವೆಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಎಆರ್–26/ಸಿ–4/ನೋಂದಣಿ/ ಸೌ.ಸನೋಂ/2012–13 ಹಾಗೂ ವಿಶೇಷ ಕರ್ತವ್ಯಾಧಿಕಾರಿ, ಸಹಕಾರ ಇಲಾಖೆ ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ ಸಿಓ/355/ಸಿಎಲ್‌ಎಂ/2005.ದಿನಾಂಕ: 12.04.2006 ಮೂಲಕ ಆದೇಶಿಸಲಾಗಿದೆ.

## ಕ್ಷೀರ ಕ್ರಾಂತಿಯ ಹರಿಕಾರನಿಗೆ ಶ್ರದ್ಧಾಂಜಲಿ



**ಡಾ॥ ವರ್ಗೀಸ್ ಕುರಿಯನ್**

ಕ್ಷೀರಾ ಕ್ರಾಂತಿಯನ್ನು ಜಗತ್ತಿಗೆ ಸಾರಿದ ಸಾಮಾಜಿಕ ಕಳಕಳಿಯ ಡಾ॥ ವರ್ಗೀಸ್ ಕುರಿಯನ್‌ರವರು ದಿ : 9-09-2012 ರಂದು ನಿಧನರಾಗಿದ್ದ ಪ್ರಯುಕ್ತ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಮಂಡ್ಯ ಜಿಲ್ಲಾ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ.ದ ಪ್ರಥಮ ವರ್ಷದ ಸರ್ವ ಸದಸ್ಯರ ಸಭೆ ದಿನಾಂಕ : 20.08.2012ರಂದು ಶ್ರೀ ಎಸ್. ನಾಗರಾಜುರವರ ಅಧ್ಯಕ್ಷತೆಯಲ್ಲಿ ನಗರದ ವಿಜಯಲಕ್ಷ್ಮೀ ಸಮುದಾಯ ಭವನದಲ್ಲಿ ನಡೆಯಿತು. ಮತ್ತೊಂದು ಚಿತ್ರದಲ್ಲಿ ಕನಕಪುರದ ಶ್ರೀ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳಿಂದ ಉದ್ಘಾಟನೆ.



ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ನಿಸರ್ಗ ಸ್ವ-ಶಕ್ತಿ ಸೌಹಾರ್ದ ಸ್ವ-ಸಹಾಯ ಸಹಕಾರಿ ನಿಯಮಿತದಲ್ಲಿ 9ನೇ ಸಾಮಾನ್ಯ ಸಭೆ ಯಶಸ್ವಿಯಾಗಿ ಜರುಗಿತು.

## ವಿವಿಧ ಮಹಾಮಂಡಳಗಳಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು.



ಶ್ರೀ ಆರ್.ಎಂ.ಮಂಜುನಾಥಗೌಡ
ಅಧ್ಯಕ್ಷರು



ಶ್ರೀ ಶಿವಾನಂದ ಅಪ್ಪಸಾಬ ಮಾನಕರ
ಉಪಾಧ್ಯಕ್ಷರು

### ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.



ಶ್ರೀ ಜಿ.ಟಿ.ದೇವೇಗೌಡ
ಅಧ್ಯಕ್ಷರು



ಶ್ರೀ ಸಿದ್ರಾಮರೆಡ್ಡಿ ವಿ. ಪಾಟೀಲ್
ಉಪಾಧ್ಯಕ್ಷರು

### ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು.



ಶ್ರೀ ಎ.ಆರ್. ಶಿವರಾಂ
ಅಧ್ಯಕ್ಷರು



ಶ್ರೀ ಬಿ. ರಾಮಚಂದ್ರಪ್ಪ ಬೆಳ್ಳೋಡಿ
ಉಪಾಧ್ಯಕ್ಷರು

### ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು.



ಶ್ರೀ ಹೆಚ್.ಕೆ. ಪಾಟೀಲ್
ಅಧ್ಯಕ್ಷರು



ಶ್ರೀ ಡಿ.ಟಿ. ಪಾಟೀಲ್
ಉಪಾಧ್ಯಕ್ಷರು



### ರಾಷ್ಟ್ರೀಯ ಸಹಕಾರಿ ನೂಲಿನ ಗಿರಣಿಗಳು ಮಹಾಮಂಡಳ

ಶ್ರೀ ಆರ್ ಎನ್.ದೇಶಪಾಂಡೆ
ಅಧ್ಯಕ್ಷರು ಹಾಗೂ
ಸಂಯುಕ್ತ ಸಹಕಾರಿಯ ನಿರ್ದೇಶಕರು.

# "ನಾವು ಧೀಮಂತ ನಾಯಕರಾಗುವುದು ಹೇಗೆ? – ಈ 30 ಸಫಲತೆಯ ಸೂತ್ರಗಳನ್ನು ನಿಮ್ಮದಾಗಿಸಿಕೊಳ್ಳಿ

...ಹಿಂದಿನ ಸಂಚಿಕೆಯಿಂದ

19) **ಬದಲಾವಣೆಯ ನಿರ್ವಹಣೆಯ ತಂತ್ರಗಳು** (**Change management strategies**) : ನಾಯಕನಾದವನು ಬದಲಾವಣೆಯ ಹರಿಕಾರನಾಗ ಬೇಕು, ಏಕೆಂದರೆ ಈಗಿನ ಜಗತ್ತು ನಾಗಾಲೋಟದಲ್ಲಿ ಬದಲಾಗುತ್ತಿದೆ. ಕಾಲಕ್ಕೆ ತಕ್ಕಂತೆ ವಿಚಾರದಲ್ಲಿ – ಕಾರ್ಯಪ್ರವೃತ್ತಿಯಲ್ಲಿ – ತಂತ್ರಜ್ಞಾನದಲ್ಲಿ ಸಂಪರ್ಕಜಾಲದಲ್ಲಿ ಮುಂತಾದ ವಿವಿಧ ರೀತಿಯ ಬದಲಾವಣೆಗಳನ್ನು ಸತತವಾಗಿ ತರಬೇಕು.

20) **ಸಮಾನತೆಯ ಮಾನದಂಡ** (**Principle of equality**): ಇಂಗ್ಲೀಷ ನಲ್ಲಿ ಒಂದು ಉಕ್ತಿ ಈ ರೀತಿ ಇದೆ **"Rule is rule, rule for all"** (ನಿಯಮ ನಿಯಮವೇ, ಎಲ್ಲರಿಗೂ ಒಂದೇ ನಿಯಮ), ಅಂದರೆ ಭೇದಭಾವಕ್ಕೆ ನಾಯಕನಲ್ಲಿ ಅವಕಾಶವಿಲ್ಲ.

21) **ಕ್ರೀಯಾಶೀಲತೆ ಹಾಗೂ ಹೊಸತನ** (**Creativity & innovation in approach**): ಮಾಡುವ ಯಾವುದೇ ಕೆಲಸದಲ್ಲಿ, ಅಳವಡಿಸಿಕೊಳ್ಳುವ ಪದ್ಧತಿಯಾಗಲಿ, ಗಳಿಸುವ ಸಫಲತೆಯಲ್ಲಿ ಕ್ರೀಯಾಶೀಲತೆ ಹಾಗೂ ಸಂಸ್ಥೆಗಳಿಗೆ ಹೊಸತನ ಎದುರಾಗಬೇಕು. ಇವೆರಡು ವ್ಯಕ್ತಿ ಹೊಸ ಜೀವ ತುಂಬುತ್ತದೆ. ವಿನೂತನ ವಿಚಾರಧಾರೆ ಹೊಸತನದ ಹಾದಿಯನ್ನು ಹುಟ್ಟುಹಾಕುತ್ತದೆ.



– **ಡಾ.ನಂದೀಶ ಹಿರೇಮಠ**
ಆಡಳಿತ ಸಲಹೆಗಾರ ಹಾಗೂ ತರಬೇತಿದಾರ.

22) **ಬುದ್ಧಿವಂತಿಕೆ** (**Intelligence**) : ಸ್ವಯಂಪ್ರೇರಿತ ವ್ಯಕ್ತಿಯಲ್ಲಿ ತನ್ನದೆ ಆದ ವಿಶೇಷ ಬುದ್ಧಿವಂತಿಕೆ – ಚಾಣಾಕ್ಷತೆ ಇರುತ್ತದೆ. ಅದನ್ನು ವ್ಯಕ್ತಿಯ – ಸಂಸ್ಥೆಯ ಏಳ್ಗೆಗಾಗಿ ಸಮರ್ಪಕವಾಗಿ ಉಪಯೋಗಿಸಬೇಕು. ಅದೇ ರೀತಿ ತಾನು ಜಾಣ/ ಬುದ್ದಿವಂತ ಅಂತಾ ತೋರಿಸಿಕೊಳ್ಳುವ ಅವಶ್ಯಕತೆಯಿಲ್ಲ, ಅದು ಅವನ ಕೆಲಸದಿಂದ ಕಾಣಬೇಕು.

23) **ಮಾಪಕತೆಯಿಂದ ಮಾರ್ಪಾಡು** (**Setting high standards / benchmasking**) : ಯಾವುದೇ ಕೆಲಸ ಅಥವಾ ಯೋಜನೆ ಮಾಡುವಾಗ, ಹೆಚ್ಚಿನದಾದ ಅಂದರೆ ನಿಜಸ್ಥಿತಿಗೆ ಅನುಗುಣವಾದ ಮಾಪಕತೆಯಿಂದ ಕಾರ್ಯಪ್ರವೃತ್ತಿಯಾದಾಗ ಸಫಲತೆ ನಿಶ್ಚಿತ.

24) ನಾಯಕತ್ವದ ಬೆಳವಣಿಗೆ (**Succession of Leadership**): ಒಬ್ಬ ನಿಜವಾದ ನಾಯಕ, ತನ್ನ ಜೊತೆ ಮತ್ತು ತನ್ನ ಬೆನ್ನ ಹಿಂದೆ ಹತ್ತು–ಹಲವು ನಾಯಕರನ್ನು ತಯಾರಿಸಿ – ಬೆಳೆಸಿ– ಪೋಷಿಸುತ್ತಾನೆ. ಆಗ ಮುಂದಿನ ಕಾರ್ಯ–ತಂತ್ರಗಳಿಗೆ ನಾಯಕರ ನಾಯಕತ್ವದ ಕೊರತೆ ಇರುವುದಿಲ್ಲ.

25) **ಸವಾಲುಗಳಿಂದ ಅವಕಾಶಗಳತ್ತ** (**From challenges to opportunities**): ನಿಜವಾದ ನಾಯಕ ತನ್ನ ಸುತ್ತ–ಮುತ್ತ ಇರುವ ತೊಂದರೆಗಳಾಗಲಿ – ಸಮಸ್ಯೆಗಳನ್ನಾಗಲಿ – ಸವಾಲುಗಳನ್ನಾಗಲಿ", ಅಪೂರ್ವ ಅವಕಾಶ"ಗಳನ್ನಾಗಿ ಪರಿವರ್ತಿಸಿಕೊಂಡು ಪರಿಣಾಮ (ಡಿಞಣಟಣ) ಬರುವಂತೆ ಮುನ್ನಡೆಯುತ್ತಾನೆ.

26) **ತಂಡದ ಮುಖಂಡ** (**Team Spirit**) : ತನ್ನ ತಂಡದಲ್ಲಿ, ಎಲ್ಲರ ಅಭಿಮತ – ವಿಚಾರ – ಆಶಯಗಳನ್ನು ಕೇಳಿ, ವಿಶ್ಲೇಷಣೆ ಮಾಡಿ, ವಿಮರ್ಶಾತ್ಮಕ ನಿರ್ಧಾರದಿಮದ ಕೆಲಸ ಮಾಡುವುದು ಒಳಿತು. ಅದರ ಬದಲಾಗಿ ಚಾಡಿ ಮಾತು ಕೇಳಿ ಕಾರ್ಯನಿರ್ವಹಿಸಿದರೆ ಅಪಾಯ ಕಟ್ಟಿಟ್ಟ ಬುತ್ತಿ.

27) **ಮೌಲ್ಯಗಳು ಮತ್ತು ನೀತಿ ನಿಯಮಗಳು** (**Values & Ethics**) : ಏನೇ ಕೆಲಸ ಮಾಡುವಾಗ ಉತ್ತಮ–ಉದಾತ್ಯ ಮೌಲ್ಯಗಳನ್ನು ಎತ್ತಿಹಿಡಿದು ನಾಯಕ ಕೆಲಸ ಮಾಡಿದರೆ, ತಂಡದವರು ಮಾಡಲು ಸುಲಭವಾಗುತ್ತದೆ.

28) **ಮಾದರಿ ವ್ಯಕ್ತಿತ್ವ** (**Role model personality**) : 'ನಾಯಕನನ್ನು ನೋಡಿ ಕಲಿಯಬೇಕು' ಎಂಬಂತೆ ಅವನ ವ್ಯಕ್ತಿತ್ವ ಮಾದರಿಯಾಗಿರಬೇಕು. "A real leader is one who Knows the way shows the way, walks the way" (ಅಂದರೆ ನಿಜವಾದ ನಾಯಕನಿಗೆ ತಾನು ನಡೆಯುವ ದಾರಿ ಗೊತ್ತಿದೆ. ದಾರಿ ತೋರಿಸುತ್ತಾನೆ ಮತ್ತು ಮಾತಿನಂತೆ ಕೃತಿಯಲ್ಲಿ ಮಡುತ್ತಾನೆ.

29) **ಸತತ ಕಲಿಕೆಯ ಪ್ರವೃತ್ತಿ** (**Continous learning habit**) : ಒಬ್ಬ ವ್ಯಕ್ತಿ ಅಥವಾ ತಂಡ ಅಥವಾ ಸಂಸ್ಥೆ ಮುಂದುವರಿಯಬೇಕಾದರೆ ಸತತವಾಗಿ ಹೊಸ ವಿಚಾರ–ತಂತ್ರ–ಕೌಶಲ್ಯಗಳನ್ನು ಕಲಿಯಬೇಕು ಮತ್ತು ಸದಾ ಕಲಿಯುತ್ತಿರಬೇಕು. ಅದೇ ನಿರಂತರ ಯಶಸ್ಸಿನ ಗುಟ್ಟು.

30) **ನಾಯಕತ್ವದ ಆಯಸ್ಕಾಂತತೆ** (**Magnetic charisma of Leadership Excellence**) : ಮೇಲೆ ವಿವರಿಸಿದ ಎಲ್ಲಾ ಗುಣಗಳಿಲ್ಲವಾದರೂ ಕೆಲವು ಗುಣ ಗಳನ್ನು ಅಳವಡಿಸಿಕೊಂಡರೆ ಅಥವಾ ಮೈಗೂಡಿಕೊಂಡರೆ ಅಥವಾ ಹೆಚ್ಚಿಸಿಕೊಂಡರೆ, ನಾಯಕನ ವ್ಯಕ್ತಿತ್ವ ಆಯಸ್ಕಾಂತದಂತೆ ಬೇರೆಯವರನ್ನು ತನ್ನೆಡೆಗೆ ಎಳೆದುಕೊಳ್ಳುತ್ತಾನೆ(ಳೆ). ಇದರಿಂದ ನಾಯಕರ ಒಂದು ತಂಡ ನಿರ್ಮಾಣವಾಗಿ, ಉತ್ಕೃಷ್ಟತೆ (Excellence) ಮತ್ತು ದಿಟ್ಟ ಹೆಜ್ಜೆಹಾಕಿ ಎಲ್ಲರೂ ಸಫಲರಾಗುತ್ತಾರೆ.

ಇಲ್ಲಿಯವರೆಗೆ, ನಾವೆಲ್ಲಾ 'ಸಮರ್ಥ ನಾಯಕ'ನ ಗುಣಗಳ ಬಗ್ಗೆ–ಕೌಶಲ್ಯಗಳ ಬಗ್ಗೆ ತಿಳಿದುಕೊಂಡಿದ್ದೇವೆ. ನಾವು ನೀವೆಲ್ಲಾ ಸೇರಿ ಈ ನಾಯಕತ್ವದ ಸಫಲತೆಯ ಸೂತ್ರಗಳನ್ನು ಅರಿತುಕೊಂಡು – ಅರಗಿಸಿಕೊಂಡು ಅಳವಡಿಸಿಕೊಳ್ಳೋಣ ಬನ್ನಿ.! ■

## ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ

ಸೌಹಾರ್ದ ಸಹಕಾರಿಯಿಂದ ಮೂಡಿಬರುತ್ತಿರುವ ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯು ರಾಜ್ಯದ ಎಲ್ಲ ಸೌಹಾರ್ದ ಹಾಗೂ ಸಂಘ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೂ ಹಾಗೂ ಆಡಳಿತ ಮಂಡಳಿಯವರಿಗೂ ತುಂಬ ಉಪಯುಕ್ತವಾಗಿದೆ. ಅದೇ ರೀತಿ ಈ ಪತ್ರಿಕೆಯು ರಾಜ್ಯದ ಎಲ್ಲ ಗ್ರಂಥಾಲಯ ಹಾಗೂ ಶಿಕ್ಷಣ, ಸಂಸ್ಥೆಗಳಲ್ಲಿಯೂ ಕೂಡ ವಿತರಿಸುವ ವ್ಯವಸ್ಥೆ ಮಾಡುವುದಾಗಬೇಕು. ಅದೇ ರೀತಿ ಪತ್ರಿಕೆಯಲ್ಲಿ ಒಂದೆರೆಡು "ನಗೆಹನಿ", "ಹನಿಗವನಗಳು" ಹಾಗೂ ಸಹಕಾರಿ ರಂಗದ ಕುರಿತಾದ ಶ್ಲೋಕಗಳು ಇದ್ದರೆ ಇನ್ನು ಉತ್ತಮ ಮಾಸಪತ್ರಿಕೆಯಾಗಿ ಹೊರಹೊಮ್ಮುತ್ತದೆ ಹೀಗೇ ಇನ್ನಷ್ಟು ಬಹಳ ಒಳ್ಳೆ ಸುದ್ದಿಯನ್ನು ಹೊರತಂದು ಉತ್ತಮ ಮಾಸಪತ್ರಿಕೆಯಾಗಿ ಹೊರಹೊಮ್ಮಲಿ ಎಂದು ಆಶಿಸುತ್ತೇನೆ.

– **ಆರ್. ಸುರೇಶ್,** ತುಮಕೂರು.

## ...ಸಬಲೀಕರಣ ಹಾಗೂ ಗ್ರಾಮೀಣ ಮಹಿಳೆ

(...14ನೇ ಪುಟದಿಂದ)

ವೇತನದಲ್ಲಿ ಸಮಾನತೆ ಇದೆಯೇ?

ಉದಾಹರಣೆಗೆ ಗ್ರಾಮೀಣ ಪ್ರದೇಶದಲ್ಲಿ ಗದ್ದೆ ಕೆಲಸ ಮಾಡುವ ಮಹಿಳೆಯರಿಗೆ ಪುರುಷ ಸಮಾನ ಕೆಲಸ ನಿರ್ವಹಿಸಿದರು ಕೂಡ ಪುರುಷರಿಗೆ 200 ರೂ ಇದ್ರೆ ಮಹಿಳೆಗೆ 150 ಹೀಗೆ ತಾರತಮ್ಯ ವಾಗಿರುತ್ತದೆ. ಮಹಿಳೆಯರು ಮಾಡುವ ಕೆಲಸ ಯಾವುದೇ ಇರಲಿ ಅವರೀಗೆ ಸಾಧ್ಯವಾದಷ್ಟು ಚುರುಕಿನಿಂದ ಮಾಡುತ್ತಾರೆ ಆದರೆ ಹೆಣ್ಣೆಂಬ ನೆಪಕ್ಕೆ ಅವಳಿಗೆ ವೇತನ ಕಡಿಮೆಯೆ ಕೋಡುತ್ತಾರೆ. ಆದರೆ ಒಂದು ವಿಷಯ ಗಮನಿಸಬೇಕೆಂದರೆ ಕೃಷಿಕಾರ್ಯಗಳಲ್ಲಿ ಅತೀ ತಾಳ್ಮೆಯನ್ನುಪಯೋಗಿಸಿ ಕೆಲಸ ಮಾಡುವವರು ಮಹಿಳೆಯರೆ. ಕಳೆ ಕೀಳುವುದು ಈ ತರಹದ ಅನೇಕ ಸೂಕ್ಷ್ಮಾತಿ ಸೂಕ್ಷ್ಮ ಕೆಲಸಗಳನ್ನು ಮಹಿಳೆಗೆ ವಹಿಸಿಕೊಡುತ್ತಾರೆ ಏಕೆಂದರೆ ಅದನ್ನು ಅತಿ ತಾಳ್ಮೆಯಿಂದ ಅಚ್ಚುಕಟ್ಟಾಗಿ ಕೆಲಸ ಮಾಡಲು ಸಾಧ್ಯವಿರುವುದು ಮಹಿಳೆಯರಿಗೆ ಮಾತ್ರ ಎಂಬುದರಲ್ಲಿ ಎರಡು ಮಾತಿಲ್ಲ ಅಲ್ಲವೇ? ಇನ್ನೂ ಕೈಗಾರಿಗಕಾ ಗುಡಿ ಕೈಗಾರಿಕೆಗೆ ಗಮನ ಹರಿಸಿದರೆ ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿ ದಾಪು ಗಾಲು ಇಡುತ್ತಿದ್ದಾರೆ ನೇಯ್ಗೆಯಲ್ಲಿ ಕಸೂತಿ ಕೆಲಸವಿರಲಿ ಅಥವಾ ಮನೆ ಮಕ್ಕಳನ್ನು ನೋಡಿಕೊಳ್ಳುವ ಇಂತಹ ಕೆಲಸಗಳೆಲ್ಲ ಅತೀ ತಾಳ್ಮೆಯಿಂದ ಮಾಡುವ ಚಾಣಕ್ಷತನ ಪ್ರಾಮಾಣಿಕತೆ ಸಹನೆ ಇವುಗಳೆಲ್ಲ ಮಹಿಳೆ ಎಂದರೆ ತಪ್ಪಿಲ್ಲ.

ಅದಕ್ಕಾಗಿ ಮಹಿಳೆಯರು ಸ್ತ್ರೀ ಶಕ್ತಿಯಂತಹ ಅನೇಕ ಸಂಘಗಳನ್ನು ರೂಪಿಸಿಕೊಂಡು ಆರ್ಥಿಕ ಸಬಲಳಾಗುತ್ತಿದ್ದಾರೆ ಇಂತಹ ಮಹಿಳೆಯರಿಗೆ ಸಹಕಾರ ಕ್ಷೇತ್ರವು ಸಹಾಯ ಹಸ್ತ ನೀಡಿದರೆ ಖಂಡಿತಾ ಮಹಿಳೆಯರು ಕೂಡ ಆರ್ಥಿಕವಾಗಿ ಸಬಲೀಕರಣವಾಗುತ್ತಾರೆ, ಎಂಬದುರಲ್ಲಿ ಎರಡು ಮಾತ್ತಿಲ್ಲ. ಸರ್ಕಾರದ್ದು ಅನೇಕ ಮಹಿಳಾ ಅಭಿವೃದ್ಧಿ ಯೋಜನೆಗಳು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸಿಗುವಂತಾಗಲಿ ಅವರಿಗೆ ಆ ಯೋಜನೆಗಳ ಬಗ್ಗೆ ಅರಿವು ಮೂಡುವಂತಾಗಲಿ ಮಹಿಳಾ ಆರ್ಥಿಕ ಸಬಲೀಕರಣವಾಗಲಿ. ■

## ...ಸಬಲೀಕರಣ ಪರ್ವಕಾಲ

(...15ನೇ ಪುಟದಿಂದ)

ವರ್ಷಗಳ ಕಾಲ ನಿರಂತರವಾಗಿ ಆಳಿರುತ್ತಾರೆ. ನಂತರದಲ್ಲಿ 1979ರ ಮಥುರಾ ಪ್ರಕರಣದಲ್ಲಿ ದೇಶದ್ಯಾಂತ ನಡೆದ ಮಹಿಳಾ ಹೋರಾಟವು ದೇಶದಲ್ಲಿ ಮಹಿಳೆಯರ ವಿರುದ್ಧ ಧ್ವನಿ ಎತ್ತುವವರ ಶಕ್ತಿಯನ್ನು ಕುಂದಿಸಿತು. ನಂತರದಲ್ಲಿ ಆಂಧ್ರ ಪ್ರದೇಶ, ಹಿಮಾಚಲ ಪ್ರದೇಶ, ಒರಿಸ್ಸಾ, ಹರಿಯಾಣಗಳಲ್ಲಿ ಮಧ್ಯಪಾನದ ವಿರುದ್ಧ ನಿರಂತರ ಮಹಿಳಾ ಹೋರಾಟಗಳು ನಡೆದವು.

1990ರ ದಶಕದಲ್ಲಿ ನಡೆದ ನರ್ಮದಾ ಬಚಾವೋ ಆಂದೋಲನದ ನೇತೃತ್ವವನ್ನು ಮೇದಾ ಪಾಟ್ಕರ್‌ರವರು ವಹಿಸಿದ್ದರು. 2001ರಲ್ಲಿ ಕೇಂದ್ರ ಸರ್ಕಾರವು ಸ್ವಶಕ್ತಿ ವರ್ಷವೆಂದು ಘೋಷಿಸಿ, ದೇಶದಾದ್ಯಂತ ಸ್ವಶಕ್ತಿ ಸಂಘಗಳನ್ನು ರಚಿಸಿ, ಈ ಮೂಲಕ ಮಹಿಳೆಯರನ್ನು ಆರ್ಥಿಕ ಸಬಲರನ್ನಾಗಿ ಮಾಡಲು ಅವಕಾಶ ಕಲ್ಪಿಸಿದೆ.

ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿದಾಗ 2010ರಲ್ಲಿ ಮಹಿಳೆಯರಿಗೆ ಮಹಿಳಾ ಮೀಸಲಾತಿಗೆ ಸಂಬಂಧಿಸಿದ ಮಸೂದೆಯು ರಾಜ್ಯಸಭೆಯಲ್ಲಿ ಅಂಗೀ ಕಾರವಾಗಿರುತ್ತದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಮಹಿಳಾ ಮೀಸಲಾತಿ ಮಸೂದೆ ಇತ್ತೀಚಿನ ದಿನಗಳಲ್ಲಿ ಅಂಗೀಕಾರವಾಗಿರುವುದನ್ನು ಗಮನಿಸಿದಾಗ ಮಹಿಳಾ ಸಬಲೀಕರಣಕ್ಕೆ ಇದು ಪರ್ವಕಾಲ ಎಂಬುದರಲ್ಲಿ ಸಂಶಯವಿಲ್ಲ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮುಂಚೂಣಿ ಯಲ್ಲಿರುವ ಸೋನಿಯಾಗಾಂಧಿ, ಪ್ರತಿಭಾ ಪಾಟೀಲ್, ಮಾಯಾವತಿ, ಜಯಲಲಿತಾ, ಮಮತಾ ಬ್ಯಾನರ್ಜಿ, ಶೀಲಾ ದೀಕ್ಷಿತ್, ಮೀರಾ ಕುಮಾರಿ, ಸುಷ್ಮಾ ಸ್ವರಾಜ್, ವಸುಂದರರಾಜ್, ಉಮಾಭಾರತಿ ಮೊದಲಾದವರನ್ನು ಕಾಣಬಹುದು. ಇತರ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಆಯ್ದ ಸಾಧಕಿಯ ರಾದ ಐಶ್ವರ್ಯ ರೈ, ಕಿರಣ್ ಬೇಡಿ, ಲತಾ ಮಂಗೇಶ್ಕರ್, ಆಶಾಬೋಸ್ಲೆ, ಪಿ.ಟಿ.ಉಷಾ, ಕುಂಚರಾಣಿ ದೇವಿ, ಕೆನೆರೂ ಹಂಪಿ, ಕರಣಂ ಮಲ್ಲೇಶ್ವರಿ, ಮೇರಿ ಕೋಂ, ಯಕ್ತಾ ಕಪೂರ್, ಶೋಭ ಡೇ, ದೀಪಿಕಾ ಪಡುಕೋಣೆ, ಇಂದ್ರಾ ನೂಯಿ, ಕಿರಣ್ ಮಜುಮ್‌ದಾರ್ ಮೊದಲಾದವರನ್ನು ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಮುಂಚೂಣಿ ಯಲ್ಲಿದ್ದಾರೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿ ದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಬರುವ ಪ್ರತಿ ಫಲಿತಾಂಶದಲ್ಲಿಯೂ ಮಹಿಳೆಯರೇ ಅಗ್ರಸ್ಥಾನವನ್ನು ಕಾಯ್ದುಕೊಳ್ಳುತ್ತಿದ್ದಾರೆ. ಮಹಿಳೆಯರು ಆಸ್ತಿಯಲ್ಲಿ ಪುರುಷರಷ್ಟೇ ಸಮಾನ ಭಾಗವನ್ನು ಪಡೆಯುತ್ತಿದ್ದಾರೆ. ಮಹಿಳೆಯರು ಸಾಹಿತ್ಯ, ಕ್ರೀಡೆ, ತಂತ್ರಜ್ಞಾನ ಹಲವಾರು ಕ್ಷೇತ್ರಗಳಲ್ಲಿ ತನ್ನ ಪ್ರಭುತ್ವವನ್ನು ಸಾಧಿಸುತ್ತಿದ್ದಾರೆ. ಮಹಿಳೆಯರು ವರದಕ್ಷಿಣೆ, ಲೈಂಗಿಕ ದೌರ್ಜನ್ಯ, ಹೆಣ್ಣು ಶಿಶು ಹತ್ಯೆ ಇವೇ ಮೊದಲಾದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ, ಮುನ್ನಡೆ ದಲ್ಲಿ 21ನೇ ಶತಮಾನವು ಮಹಿಳಾ ಸಬಲೀಕರಣಕ್ಕೆ ಪರ್ವಕಾಲ ಹಾಗೂ ಸುವರ್ಣಕಾಲವಾಗುವುದರಲ್ಲಿ ಸಂಶಯ ವಿಲ್ಲ. ■

# ಸಂವಿಧಾನದ 97ನೇ ತಿದ್ದುಪಡಿಯನ್ವಯ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿ ಕುರಿತು ಕಾರ್ಯಗಾರ

## ಸುಗ್ರೀವಾಜ್ಞೆಯ ಮೂಲಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಹೆಚ್.ಕೆ.ಪಾಟೀಲ್ ಸಲಹೆ



ಸಂವಿಧಾನದ 97ನೇ ತಿದ್ದುಪಡಿಯನ್ವಯ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಯಲ್ಲಿ ಅಳವಡಿಸ ಬಹುದಾದ ಅವಶ್ಯಕ ತಿದ್ದುಪಡಿಗಳನ್ನು ಸಿದ್ದಪಡಿಸುವುದಕ್ಕಾಗಿ ವಿಚಾರಣಾಗೋಷ್ಠಿಯನ್ನು ಬೆಂಗಳೂರು ಅಪೆಕ್ಸ್ ಬ್ಯಾಂಕ್ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು ಸಂವಿಧಾನ ತಿದ್ದುಪಡಿಯ ಉನ್ನತ ಅಧಿಕಾರದ ಸಮಿತಿ ಸದಸ್ಯರೂ ಆಗಿರುವ ಶ್ರೀ ಹೆಚ್.ಕೆ.ಪಾಟೀಲ್‌ರವರು ದೇಶದ ಸಹಕಾರ ಚಳು ವಳಿಯನ್ನು ಬಲಪಡಿಸುವುದಕ್ಕಾಗಿ ಈ ಸಂವಿಧಾನ ತಿದ್ದುಪಡಿ ಅಗತ್ಯವಾಗಿತ್ತು. ಈ ತಿದ್ದುಪಡಿಯನ್ನು ಜಾರಿಗೊಳಿಸುವುದರಿಂದ ಸಹಕಾರ ಕ್ಷೇತ್ರದ ಬೆಳ ವಣಿಗೆಗೆ ಪೂರಕವಾಗಿದೆ ಎಂದು ಕೇಂದ್ರ ಮಂತ್ರಿ ಶ್ರೀ ಶರದ್ ಪವಾರ್‌ರವರನ್ನು ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಹಕಾರ ಸಚಿವರಾದ ಶ್ರೀಯುತ ಎಸ್. ಎಸ್.ಪಾಟೀಲ್‌ರವರು ವಹಿಸಿಕೊಂಡು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ದೇಶದಲ್ಲಿಯೇ ಮಾದರಿಯಾಗಿದೆ. ಇದು ಮುಂದುವರಿಯಬೇಕು. ಅಭಿವೃದ್ಧಿಗೆ ಪೂರಕವಾಗುವಂತೆ ಸಂವಿಧಾನದ 97ನೇ ತಿದ್ದುಪಡಿ ವ್ಯಾಪ್ತಿಯೊಳಗೆ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯನ್ನು ಮಾಡುವ ಅವಶ್ಯಕತೆಯಿದೆ. ಇಂದಿನ ವಿಚಾರಗೋಷ್ಠಿಯಲ್ಲಿ ಈ ಬಗ್ಗೆ ಉಪಯುಕ್ತ ಚರ್ಚೆಯಾಗಬೇಕೆಂದರು. ವಿಷಯ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರಾದ ಶ್ರೀಯುತ ಎಸ್.ಜಿ.ಹೆಗಡೆ ಯವರು ಮಾತನಾಡಿ ಈ ಬಗ್ಗೆ ಈಗಾಗಲೇ ಸರ್ಕಾರದ ಹಂತದಲ್ಲಿ, ಅಧಿಕಾರಿಗಳ ಹಂತದಲ್ಲಿ ತಿದ್ದುಪಡಿಗಳನ್ನು ಅಳವಡಿಸುವ ಬಗ್ಗೆ ಕ್ರಮವಿಡಲಾಗುತ್ತಿದೆ. ಸಂವಿಧಾನದ ತಿದ್ದುಪಡಿಯನ್ವಯ ದೇಶದಲ್ಲಿಯೇ ಕರ್ನಾಟಕ ರಾಜ್ಯವು ಸಹಕಾರಿ ಕಾಯ್ದೆಗೆ ತಿದ್ದುಪಡಿ ಅಳವಡಿಸುವ ಪ್ರಥಮ ರಾಜ್ಯವಾಗಿದೆ ಎಂದು ತಿಳಿಸಿ ಸಂವಿಧಾನ 97ನೇ ತಿದ್ದುಪಡಿಯಿಂದ ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸದಸ್ಯರಿಗೆ ಆಡಳಿತ ಮಂಡಳಿಯವರಿಗೆ ಹೆಚ್ಚಿನ ಜವಾಬ್ದಾರಿಯಿರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಲೋಕೋಪಯೋಗಿ ಸಚಿವ ಶ್ರೀಯುತ ಸಿ.ಎಂ.ಉದಾಸಿಯವರು 97ನೇ ಸಂವಿಧಾನದ ತಿದ್ದುಪಡಿಯ ಆಧಾರದ ಮೇಲೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಅಳವಡಿಸುವಲ್ಲಿ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ನಿವೃತ್ತ ಅಪರ ನಿಬಂಧಕರಾದ ಶ್ರೀಯುತ ಸಿ.ಎನ್.ಪರಶಿವಮೂರ್ತಿ, ಶ್ರೀಯುತ ಎಂ.ಅಶ್ವತ್ಥನಾರಾಯಣ, ಶ್ರೀಯುತ ಆರ್. ಎಸ್.ಹುಚ್ಚಾಚಾರಿರವರು ವಿಷಯ ಪ್ರಸ್ತಾವನೆ ಮಾಡಿದರು.

ಸಮಾರಂಭದಲ್ಲಿ ಹಿರಿಯ ಸಹಕಾರಿಗಳಾದ ಶ್ರೀಯುತ ಬಸವರಾಜ ಪಾಟೀಲ್ ಯತ್ನಾಳ್, ಶ್ರೀಯುತ ಬಿ.ಆರ್.ಪಾಟೀಲ್, ಸಂಯುಕ್ತ ಸಹಕಾರಿಯ ನಿರ್ದೇಶಕರು, ವಿವಿಧ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಅಧಿಕಾರಿಗಳು ಭಾಗವಹಿಸಿದ್ದರು. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಅಳವಡಿಸ ಬಹುದಾದ ತಿದ್ದುಪಡಿಗಳ ಕೂಲಂಕುಶ ಚರ್ಚೆ ನಡೆಸಲಾಯಿತು.

ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್ ಸ್ವಾಗತಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಯುತ ಎಸ್.ಆರ್.ಸತೀಶ್ಚಂದ್ರರವರು ಪ್ರಸ್ತಾವಿಕ ಭಾಷಣ ಮಾಡಿದರು.








# ಕನಿಷ್ಠ ವ್ಯಕ್ತಿಯ ಆಶೋತ್ತರಗಳಿಗೆ ಸ್ಪಂದಿಸುವ ಸಹಕಾರಿ ಕ್ಷೇತ್ರ

## - ಉಪ ಮುಖ್ಯಮಂತ್ರಿ ಶ್ರೀ ಆರ್. ಅಶೋಕ

**ದಿ ಪಾವಗಡ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ದಶಮಾನೋತ್ಸವ, 14ನೇ ಶಾಖೆಯ ಉದ್ಘಾಟನೆ ಹಾಗೂ ವಾರ್ಷಿಕ ಸಮಾನ್ಯ ಸಭೆ**

**ಹರಿಯುವ ನೀರು ಹಾಗೂ ಬೀಸುವ ಗಾಳಿ ಹೇಗೆ ನಿರಂತರ ಸ್ಫಚ್ಛ ಹಾಗೂ ಸ್ಪಷ್ಟತೆಯನ್ನು ಒದಗಿಸುತ್ತದೆಯೋ ಹಾಗೆ ಸಹಕಾರ ಕ್ಷೇತ್ರವೂ ನಿರಂತರ ಕ್ರಿಯಾ ಶೀಲತೆಯನ್ನು ಹೊಂದಿರಬೇಕು. ಯಾರೊಬ್ಬರ ವೈಯಕ್ತಿಕ ಸ್ವತ್ತಾಗಬಾರದು.**





ಸಮಾರಂಭದ ಉದ್ಘಾಟನೆಯನ್ನು ಉಪ ಮುಖ್ಯಮಂತ್ರಿ ಶ್ರೀ ಆರ್. ಅಶೋಕ್ ರವರು ನೆರವೇರಿಸಿದರು. ಮತ್ತೊಂದು ಚಿತ್ರದಲ್ಲಿ ಶ್ರೀ ಸಂತೋಷ್‌ಜಿ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ಸಹಕಾರ ಕ್ಷೇತ್ರ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ, ಸಮುದಾಯದ ಕನಿಷ್ಠ ವ್ಯಕ್ತಿಯ ಆಶೋತ್ತರಗಳಿಗೆ ಸ್ಪಂದಿಸುವ ಕ್ಷೇತ್ರವಾಗಿದೆ ಎಂದು ಉಪ ಮುಖ್ಯಮಂತ್ರಿ ಶ್ರೀ ಅಶೋಕ್ ಅಭಿಪ್ರಾಯಿಸಿದರು.

ದಿ. ಪಾವಗಡ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಹರಿಯುವ ನೀರು ಹಾಗೂ ಬೀಸುವ ಗಾಳಿ ಹೇಗೆ ನಿರಂತರ ಸ್ಫಚ್ಛ ಹಾಗೂ ಸ್ಪಷ್ಟತೆಯನ್ನು ಒದಗಿಸುತ್ತದೆಯೋ ಹಾಗೆ ಸಹಕಾರ ಕ್ಷೇತ್ರವೂ ನಿರಂತರ ಕ್ರಿಯಾ ಶೀಲತೆಯನ್ನು ಹೊಂದಿರಬೇಕು. ಯಾರೊಬ್ಬರ ವೈಯಕ್ತಿಕ ಸ್ವತ್ತಾಗಬಾರದು. ಅಲ್ಲದೇ ಸಹಕಾರಿಯ ಪದಾಧಿಕಾರಿಗಳು ನಿರಂತರ ಬದಲಾವಣೆಗೆ ಸ್ಪಂದಿಸುವ ಮನೋಭಾವ ಬೆಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ನಂತರ ನೂತನ ಶಾಖೆಯನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡರು ಮಾತನಾಡಿ ದಿ ಪಾವಗಡ ಪತ್ತಿನ ಸೌಹಾರ್ದ ಸಹಕಾರಿಯ ಪ್ರಗತಿಯನ್ನು ಪ್ರಶಂಸಿಸುವುದರ ಜೊತೆಗೆ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದೊಂದು ಉತ್ತಮ ಸೌಹಾರ್ದ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಉತ್ತಮ ಆಡಳಿತ ಮಂಡಳಿಯನ್ನು ಹಾಗೂ ದಕ್ಷ ಸಿಬ್ಬಂದಿ ಹೊಂದಿದೆ ಎಂದು ತಿಳಿಸಿದರು.

ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಡಾ॥ಆರ್.ಎಂ.ಮಂಜುನಾಥ ಗೌಡರನ್ನು ಅಭಿನಂದಿಸಲಾಯಿತು. ಶ್ರೀಯುತರು ಮಾತನಾಡಿ ವಿದೇಶದಲ್ಲಿನ ಸಹಕಾರ ಚಳುವಳಿಗಳು ಪ್ರಗತಿಯ ಬಗ್ಗೆ ವಿಷಯಗಳನ್ನು ತಿಳಿಸಿದರು. ಸಹಕಾರ ಕ್ಷೇತ್ರದ ಪ್ರಗತಿಗೆ ಸಹಕಾರಿಗಳ ನಿಸ್ವಾರ್ಥ ಸೇವೆ ಅಗತ್ಯ ಎಂದರು. ಶಾಸಕರಾದ ಶ್ರೀ ಸತೀಶರೆಡ್ಡಿಯವರು ಇ-ಸ್ಟಾಂಪಿಂಗ್ ಕೇಂದ್ರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ಲತಾ ನರಸಿಂಹಮೂರ್ತಿಯವರು ಶಾಖೆ ಕೌಂಟರ್ ಉದ್ಘಾಟಿಸಿದರು.

ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಶ್ರೀ ಸಂತೋಷ ಜಿಯವರು ಮಾತನಾಡಿ ಸಹಕಾರದ 7 ತತ್ವಗಳಲ್ಲಿ "ಸಾಮಾಜಿಕ ಕಳಕಳಿ" ಎಂಬುವುದು ಅತ್ಯಂತ ಮಹತ್ವದ್ದು. ಸಮುದಾಯದ ಸಾಮಾಜಿಕ ಆರ್ಥಿಕ ಹಾಗೂ ಸರ್ವತೋಮುಖ ಅಭಿವೃದ್ಧಿಯೇ ಸಹಕಾರ ಕ್ಷೇತ್ರದ ಮೂಲ ಉದ್ದೇಶವಾಗಿದೆ.

ಸಹಕಾರಿಗಳು ಸ್ವಾಭಿಮಾನವನ್ನು ಬೆಳೆಸಿಕೊಂಡು ಸಹಕಾರಿಯ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವಂತಾಗಬೇಕು ಎಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.ಕಾರ್ಯಕ್ರಮದಲ್ಲಿ ಕೆ.ಓ.ಎಫ್.ನ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ರೆಡ್ಡಿ, ಕ್ಯಾಸ್ಕಾರ್ಡ್ ಬ್ಯಾಂಕ್‌ನ ಅಧ್ಯಕ್ಷ ಶ್ರೀ ಶಿವರಾಂರವರು, ಅನೇಕ ಗಣ್ಯರು, ಸಹಕಾರಿಯ ಆಡಳಿಯ ಮಂಡಳಿ ಸದಸ್ಯರು, ಸದಸ್ಯರು ಪಾಲ್ಗೊಂಡಿದ್ದರು. ಸಹಕಾರಿಯ ಅಧ್ಯಕ್ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ನಂತರ ವಿಷಯ ಸೂಚಿಯ ಪ್ರಕಾರ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯು ಜರುಗಿತು.

# ಮಹಿಳಾ ಸಬಲೀಕರಣ ಪರ್ವಕಾಲ

● ಗುರುಪ್ರಸಾದ್

**ಮಹಿಳೆ ತನ್ನ ಜೀವನ ಪೂರ್ತಿ ತನ್ನ ಕುಟುಂಬ ಸದಸ್ಯರ ಸೇವೆಗೆ ತನ್ನನ್ನು ಮುಡುಪಾಗಿಟ್ಟಿರುತ್ತಾಳೆ. ಬೆಳೆಯುತ್ತಾ ತಂದೆ–ತಾಯಿಯ ಸೇವೆ ಮಾಡುವ ಹೆಣ್ಣು, ಮದುವೆ ನಂತರ ತನ್ನ ಗಂಡನ ಸೇವೆ, ನಂತರದಲ್ಲಿ ತನ್ನ ಮಕ್ಕಳ ಮತ್ತು ತನ್ನ ಅಂತಿಮ ದಿನಗಳಲ್ಲೂ ಮೊಮ್ಮಕ್ಕಳ ಸೇವೆಗೆ ತನ್ನನ್ನು ಮುಡಿಪಾಗಿಟ್ಟಿರುತ್ತಾಳೆ.**





ಭಾರತೀಯ ಸಮಾಜದಲ್ಲಿ ಪುರುಷ ಮತ್ತು ಮಹಿಳೆ ಒಂದು ರಥದ ಎರಡು ಚಕ್ರಗಳಿದ್ದಂತೆ, ರಥದಲ್ಲಿ ಯಾವುದೇ ಒಂದು ಚಕ್ರವು ತನ್ನ ಕೆಲಸವನ್ನು ಮಾಡದೆ ಇದ್ದರೆ ಅಥವಾ ನಿಷ್ಕ್ರಿಯಗೊಂಡರೆ ಇಡೀ ರಥದ ಚಾಲನೆಯಲ್ಲಿಯೇ ವ್ಯತ್ಯಾಸವಾಗುತ್ತದೆ. ಅದೇ ರೀತಿ ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿಗೆ ಸಮಾನತೆ ಮತ್ತು ಸಮನ್ವಯ ಇಲ್ಲದೆ ಹೋದರೆ ಕುಟುಂಬ ವ್ಯವಸ್ಥೆಯೇ ನಿಷ್ಕ್ರಿಯಗೊಳ್ಳುತ್ತದೆ. ಮಹಿಳೆ ಮನೆಯ ನಿತ್ಯಕೆಲಸವನ್ನು ನಿರ್ವಹಿಸುವ ಜೊತೆಗೆ ಗಂಡನ ಕಛೇರಿ ಕೆಲಸದಲ್ಲೂ ಸಹಭಾಗಿಯಾಗುವ ವ್ಯವಸ್ಥೆಯನ್ನು ಭಾರತೀಯ ಸಮಾಜದಲ್ಲಿ ಕಾಣಬಹುದು. ಇಂತಹ ಮಹಿಳೆಯ ವೈಯಕ್ತಿಕ ಅಭಿವೃದ್ಧಿ ಅಥವಾ ಏಳಿಗೆಯಲ್ಲಿ ಪುರುಷರ ಪಾಲು ಸಾಕಷ್ಟಿದೆ.

ಒಂದು ಮನೆಯಲ್ಲಿ ಒಬ್ಬ ಮಹಿಳೆ ಸುಶಿಕ್ಷಿತರಾದರೆ ಇಡೀ ಮನೆಯೇ ಸುಶಿಕ್ಷಿತರಾದಂತೆ, ಸುಶಿಕ್ಷಿತ ಮಹಿಳೆ ತನ್ನ ಕುಟುಂಬದ ಎಲ್ಲಾ ಸದಸ್ಯರು ಸುಶಿಕ್ಷಿತರನ್ನಾಗಿ ಮಾಡುವಲ್ಲಿ ಕಾರಣರಾಗುತ್ತಾಳೆ. ಮಹಿಳೆ ತನ್ನ ಜೀವನ ಪೂರ್ತಿ ತನ್ನ ಕುಟುಂಬ ಸದಸ್ಯರ ಸೇವೆಗೆ ತನ್ನನ್ನು ಮುಡುಪಾಗಿಟ್ಟಿರುತ್ತಾಳೆ. ಬೆಳೆಯುತ್ತಾ ತಂದೆ–ತಾಯಿಯ ಸೇವೆ ಮಾಡುವ ಹೆಣ್ಣು, ಮದುವೆ ನಂತರ ತನ್ನ ಗಂಡನ ಸೇವೆ, ನಂತರದಲ್ಲಿ ತನ್ನ ಮಕ್ಕಳ ಮತ್ತು ತನ್ನ ಅಂತಿಮ ದಿನಗಳಲ್ಲೂ ಮೊಮ್ಮಕ್ಕಳ ಸೇವೆಗೆ ತನ್ನನ್ನು ಮುಡಿಪಾಗಿಟ್ಟಿರುತ್ತಾಳೆ. ಇಂತಹ ಮಹಿಳೆಯ ಜೀವನ ನಿಜವಾಗಿಯು ಸಬಲೀಕರಣವಾಗಿದೆಯೇ ಈ ಕುರಿತು ಜಿಜ್ಞಾಸೆಗಳಿವೆ. ಅವುಗಳ ಬಗ್ಗೆ ಚಿಂತನೆಯ ಪರ್ವಕಾಲ ಇದಾಗಿದೆ.

ವೇದಗಳ ಕಾಲದಲ್ಲಿ ಗಮನಿಸಿದಾಗ ಮಹಿಳೆಯ ಸ್ಥಿತಿ ಅತ್ಯಂತ ಉಚ್ಚ್ರಾಯ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಉದಾಹರಣೆಗೆ ಋಗ್ವೇದ, ಉಪನಿಷತ್ತು ಗಳಲ್ಲಿ ಮಹಿಳಾ ಸನ್ಯಾಸಿಗಳಾದ ಗಾರ್ಗಿ, ಮೈತ್ರೇಯಿ ಇವರುಗಳ ಕುರಿತು ಉಲ್ಲೇಖಗಳಿರುತ್ತವೆ. ಇದರಿಂದಾಗಿ ಮಹಿಳೆಯರಿಗೆ ಸನ್ಯಾಸಿಗಳಾಗಲು ವೇದಗಳ ಕಾಲದಲ್ಲಿ ಅವಕಾಶವಿರುವುದನ್ನು ನಾವು ಗಮನಿಸಿಬಹುದು.

ನಂತರದಲ್ಲಿ ರಾಜರುಗಳ ಮತ್ತು ಮೊಗಲ್ ದೊರೆ ಆಳ್ವಿಕೆಯಲ್ಲಿ ರಜಿಯಾ ಸುಲ್ತಾನ್, ಚಾಂದ್ ಬೀಬಿ ಮತ್ತು ಜೀಜಾಬಾಯಿ, ಭಕ್ತಿ ಚಳುವಳಿಯಲ್ಲಿ ಮೀರಾಬಾಯಿ, ಅಕ್ಕಮಹಾದೇವಿ ಇದೇ ಮೊದಲಾದ ಮಹಿಳಾ ನಾಯಕರನ್ನು ನಾವು ಕಾಣಬಹುದು. ಈ ಸಂದರ್ಭದಲ್ಲಿದ್ದ ಸತಿ ಪದ್ಧತಿ, ಬಾಲ್ಯ ವಿವಾಹ, ಪರ್ದಾ ಪದ್ಧತಿ, ದೇವದಾಸಿ ಪದ್ಧತಿ ಮೊದಲಾದ ಆಚರಣೆಗಳಿಂದ ಮಹಿಳಯರ ಸ್ಥಿತಿಗತಿಗಳಲ್ಲಿ ಹಿನ್ನಡೆಯಾಗಿರುತ್ತದೆ.

ಬ್ರಿಟೀಷರ ಆಳ್ವಿಕೆಯಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಮೊದಲಾದ ಮಹಿಳಾ ಮಣಿಗಳನ್ನು ಕಾಣಬಹುದು. ಈ ಅವಧಿಯಲ್ಲಿ ರಾಜಾ ರಾಮ್ ಮೋಹನ್ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಜ್ಯೋತಿರಾವ್ ಫುಲೆಯಂತಹ ಸುಧಾರಣಾ ವಾದಿಗಳ ಪ್ರಯತ್ನದಿಂದಾಗಿ ಮಹಿಳೆಯರ ಸ್ಥಿತಿಗತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ತರಲು ಸಾದ್ಯವಾಯಿತು.

ಸ್ವಾತಂತ್ರ್ಯ ಹೋರಾಟದ ಅವಧಿಯನ್ನು ಗಮನಿಸಿದಾಗ ಬಿಕಾಜಿ ಕಾಮಾ, ಡಾ॥ಅನ್ನಿಬೆಸೆಂಟ್, ರಾಜಕುಮಾರಿ ಅಮೃತ್ ಕೌರ್, ಸುಚೇತನ ಕೃಪಲಾನಿ, ಲಕ್ಷ್ಮೀ ಸೆಹಗಲ್, ಸರೋಜಿನಿ ನಾಯ್ಡು ಮೊದಲಾದ ಬೆರಳೆಣಿಕೆಯ ಮಹಿಳಾ ನಾಯಕರನ್ನು ಕಾಣಬಹುದು. ಆದರೂ ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡಮಟ್ಟದ್ದಲ್ಲಿ ಮಹಿಳೆಯ ಭಾಗವಹಿಸುವಿಕೆ ಕಂಡುಬರಲಿಲ್ಲ.

ಸ್ವಾತಂತ್ರ್ಯ ನಂತರದಲ್ಲಿ ಮಹಿಳೆಯರಿಗೆ ಭಾರತೀಯ ಸಂವಿಧಾನದಲ್ಲೇ ಸಮಾನತೆಯ ಹಕ್ಕನ್ನು ನೀಡಿದ್ದರೂ ಕೂಡಾ ಮಹಿಳೆಯರು ಸಂವಿಧಾನದ ಆಶಯದ ಸದುಪಯೋಗ ಪಡೆಯಲು ವಿಫಲರಾಗಿರುತ್ತಾರೆ. ಸ್ವಾತಂತ್ರ್ಯ ನಂತರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು 16ನೇ ಪುಟಕ್ಕೆ









# ಸಹಕಾರ ಕ್ಷೇತ್ರ ಆರ್ಥಿಕ ಸಬಲೀಕರಣ ಹಾಗೂ ಗ್ರಾಮೀಣ ಮಹಿಳೆ

● ಗಿರೀಶ್ ಎ. ಎನ್

**ಇದು ನಮ್ಮ ಕಣ್ಣಮುಂದಿರುವ ಜೀವಂತ ಸಾಕ್ಷಿಯ ನಡುವೆ ಮಹಿಳೆಯರ ಸಮಾನತೆಯ ಘೋಷಣೆಯೊಂದಿಗಿನ 100ನೇ ವರ್ಷಾಚರಣೆ ಒಂದು ವಿಪರ್ಯಾಸ ಅಲ್ಲವೇ?**



ಕೋಟಿ ವಿದ್ಯೆಗಿಂತ ರೊಟ್ಟಿ ವಿದ್ಯೆಯೇ ಜೀವನವನ್ನು ರೂಪಿಸಿತು ಎಂದು ಇತ್ತೀಚಿನ ದಿಪತ್ರಿಕೆಗಳಲ್ಲಿ ಬಂದಿರುವ ವಿಷಯವೆಂದರೆ ಸಂಸಾರದ ನೊವು ಹೋರಲಾರದೆ ಜೀವ ಕಳೆದು ಕೊಳ್ಳುವ ಸ್ಥಿತಿಯಲ್ಲಿರುವಾಗ ತಾವು ಬೆಳೆದಂತಹ ಜೋಳದಿಂದ ರೊಟ್ಟಿಯನ್ನು ಮಾಡಿ ಮಾರಲಾರಭಿಸಿದರು. ಮತ್ತೆ ಜೀವನ ಚಿಗುರೊಡೆದಂತಾಯಿತು. ಇಂತಹ ಅನೇಕ ಉದಾಹರಣೆಗಳನ್ನು ನಾವು ದಿನ ನಿತ್ಯ ನೋಡುತ್ತೇವೆ, ಕೇಳುತ್ತೇವೆ. ಇಂತಹ ಸಾಮರ್ಥ್ಯ ಮಹಿಳೆಗೆ ನೀಡುವ ಕೂಲಿ/ ವೇತನ ಕೆಲಸಕ್ಕೆ ತಕ್ಕಂತಿಲ್ಲ.

ಹಳ್ಳಿಗಳಲ್ಲಿ ಕೂಲಿಗಾಗಿ ದಿನವಿಡೀ ದುಡಿಯುವ ಮಹಿಳೆಯರ ಆರ್ಥಿಕ ಸ್ಥಿತಿ ಇನ್ನೂ ಸುಧಾರಿಸಲಿಲ್ಲ ಯಾಕೆ ಈ ಮಾತನ್ನು ಹೇಳಿದೆ ಎಂದರೆ ಆರ್ಥಿಕತೆಯಲ್ಲಿ ಮಹಿಳೆ ಕೂಲಿ ಮಾಡಿದರೂ ಅವಳಿಗೆ ಲಿಂಗ ತಾರತಮ್ಯದಂತೆ ಗಂಡಿಗೆ ಅಧಿಕ ಕೂಲಿ ಹಾಗು ಮಹಿಳೆಗೆ ಕಡಿಮೆ ಕೂಲಿ ನೀಡುತ್ತಾರೆ. ಇದು ನಮ್ಮ ಕಣ್ಣಮುಂದಿರುವ ಜೀವಂತ ಸಾಕ್ಷಿಯ ನಡುವೆ ಮಹಿಳೆಯರ ವೇತನ ಸಮಾನತೆಯ ಘೋಷಣೆಯೊಂದಿಗಿನ 100ನೇ ವರ್ಷಾಚರಣೆ ಒಂದು ವಿಪರ್ಯಾಸ ಅಲ್ಲವೇ? ಇತ್ತೀಚೆಗೆ ಅಮೇರಿಕವು ಪ್ರಕಟಿಸಿದ "2007 ಜಾಗತೀಕ ನಗರಾಭಿವೃದ್ಧಿ ಪರಿಷ್ಕರಣಾ ವರದಿ"ಯಲ್ಲಿ ಭಾರತದ ಜನಸಂಖ್ಯೆಯ70 ಪ್ರತಿಶತ ಮಂದಿಯೂ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಎಂಬ ಸುದ್ದಿಯನ್ನು ನಾವೀಗಾಗಲೇ ಓದಿದ್ದೇವೆ. ಬಹುತೇಕ ಮಂದಿಯೂ ಹಳ್ಳಿಗಳಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಂಡುಕೊಳ್ಳಬೇಕಾದುದು ಅಗತ್ಯ. ಇದರ ಜೊತೆಗೆ ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸುವ ಮೂಲಕ ದೇಶದ ಆರ್ಥಿಕತೆಯಲ್ಲಿ ಮಹಿಳೆಯರ ಸಹಕಾರದೊಂದಿಗೆ ಮಾತ್ರ ಬೆಳವಣಿಗೆ ಹೊಂದಲು ಸಾಧ್ಯ ಎಂಬುದು ತಜ್ಞರ ಅಭಿಪ್ರಾಯ.



ಗ್ರಾಮೀಣ ಪ್ರದೇಶದಲ್ಲಿ ಅಥವಾ ಮಧ್ಯಮ ವರ್ಗದ ಜನರ ಆರ್ಥಿಕತೆಯ ಬಗ್ಗೆ ಚಿಂತನೆ ನಡೆಸಿದರೆ ಅವರ ಉದ್ಯೋಗ ಮತ್ತು ಅವರಿಗೆ ದೊರೆಯುಂತಹ ವೇತನದ ಬಗ್ಗೆಯೂ ನಾವು ಗಮನಹರಿಸಬೇಕಾಗಿದೆ. ಕಾರ್ಪೋರೇಟ್‌ಗಳ ಜೀವನ ಶೈಲಿಯಿಂದ ಒಂದು ಕ್ಷಣ ಹೊರಗೆ ಬಂದು ಮಧ್ಯಮ ವರ್ಗದ ಅಥವಾ ಗ್ರಾಮೀಣ ಜನರ ಬದುಕಿನ ಪುಟವನ್ನು ತಿರುವಿ ನೋಡಿದರೆ ಆರ್ಥಿಕ ಸ್ಥತಿಯಲ್ಲಿ ಹಿಂದುಳಿದಿರುವ ಜನರೆಂದು ಬಣ್ಣಿಸಲ್ಪಡುವ ಗ್ರಾಮೀಣ ಜನರಲ್ಲಿ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಜನರು ಹಗಲು ರಾತ್ರಿಗಳೆಂದು ದುಡಿಯುತ್ತಿರುತ್ತಾರೆ. ಆದರೆ ಮಹಿಳೆ ಮಾಡುವ ಕೆಲಸಕ್ಕೆ ದೊರೆಯುವ

16ನೇ ಪುಟಕ್ಕೆ...




## ಮಯೂರ ಸೌಹಾರ್ದ ಕ್ರೆಡಿಟ್ ಕೋ : ವಾರ್ಷಿಕ ಮಹಾಸಭೆ

ಸಾಗರದ ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಸೆ.22 ರಂದು ಸಂಸ್ಥೆಯ ಪ್ರಧಾನ ಕಛೇರಿಯಲ್ಲಿ 2011-12ನೇ ಸಾಲಿನ 10ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಶ್ರೀ ಎಂ.ಎಸ್.ವೆಂಕಟೇಶ್ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಅಧ್ಯಕ್ಷ ಭಾಷಣ ಮಾಡಿದ ಅವರು "ನಮ್ಮ ಸ್ಮೃತಿಗಳಲ್ಲಿ ಉಲ್ಲೇಖಿಸಿದಂತೆ, ನಮ್ಮ ಸಂಪತ್ತನ್ನು ಧರ್ಮ ಮಾರ್ಗದಲ್ಲಿ ಗಳಿಸಿ, ಸೂಕ್ತ ರೀತಿಯಲ್ಲಿ ಉಳಿಸಿ, ಸದುಪಯೋಗವಾಗುವಂತೆ ಬಳಸಲು" ಸದಸ್ಯರಿಗೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಸಾಹಿತಿ ಶ್ರೀ ಟಿ.ಮಹಬಲೇಶ್ವರ ಭಟ್ ಅಧ್ಯಕ್ಷತೆಯಲ್ಲಿ ಶ್ರೀ ಎಸ್.ಕಾಶೀನಾಥ್, ಶ್ರೀಮತಿ ಭಾಗೀರತಿಬಾಯಿ ಬಾಪಟ್, ಶ್ರೀ ಕೋರಿ ಶಿವಾನಂದಪ್ಪರನ್ನು ಸನ್ಮಾನಿಸಿ ಗೌರವಿಸಲಾಯಿತು.

## 3ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

ಬೆಂಗಳೂರಿನ ಯಲಹಂಕ ಉಪನಗರದ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ 2011-12ನೇ ಸಾಲಿನ 3ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಆ.19 ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಗೆ 307 ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ಸದಸ್ಯರು ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.






## 61ನೇ ಸರ್ವಸದಸ್ಯರ ಸಭೆ

ಚಿತ್ರದುರ್ಗದ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಯಲ್ಲಿ ಸರ್ವಸದಸ್ಯರ ಸಭೆ ದಿನಾಂಕ 19-08-2012 ನೇ ಭಾನುವಾರದಂದು ಬ್ಯಾಂಕಿನ 61ನೇ ಸರ್ವಸದಸ್ಯರ ಸಭೆ ಜರುಗಿತು. ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ ಹಾಗೂ ಬ್ಯಾಂಕಿನ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



## 4ನೇ ವಾರ್ಷಿಕ ಮಹಾ ಸಭೆ

ಗುಲಬರ್ಗಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ 4ನೇ ವಾರ್ಷಿಕ ಮಹಾ ಸಭೆ ಯಶಸ್ವಿಯಾಗಿ ಜರುಗಿತು. ಆ ಸಂದರ್ಭದಲ್ಲಿ ಸಭೆಯಲ್ಲಿ ಪಾಲ್ಗೊಂಡಿದ್ದ ಮಹಿಳಾ ಸಹಕಾರಿಗಳು.



## ವಿಮಾ ಚೆಕ್ ವಿತರಣೆ

ಬಾಗಲಕೋಟೆ ಜಿಲ್ಲೆಯ ಹುನುಗುಂದ ಶ್ರೀ ಗೌರಿಶಂಕರ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ ನಡೆದ ಸಂದರ್ಭದಲ್ಲಿ ಸಾಲಗಾರರಿಗೆ ವಿಮಾ ಚೆಕ್ ವಿತರಣೆ ಮಾಡಲಾಯಿತು.




## ದಶಮಾನೋತ್ಸವ ಸಮಾರಂಭ

ಶಿವಮೊಗ್ಗದ ಹೊಸಹಳ್ಳಿಯ ಧರ್ಮನ್ಯಾಸ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯ ಕ್ರಮ ಸೆ.14ರಂದು ಶ್ರೀ ಹೆಚ್.ಕೆ. ಅನಂತರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾರಂಭದಲ್ಲಿ ಶ್ರೀ ಸತೀಶ್‌ಚಂದ್ರರವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಸಹಕಾರಿಯ ಉಪಾಧ್ಯಕ್ಷ ಶ್ರೀ ರವಿಕುಮಾರ್ ಸಹಕಾರಿಯ 10 ವರ್ಷಗಳ ಸಾಧನೆ ಬಗ್ಗೆ ಸ್ಥೂಲ ಪರಿಚಯ ಮಾಡಿದರು. 10 ವರ್ಷಗಳಲ್ಲಿ ತನ್ನ ಲಾಭಾಂಶದಲ್ಲಿ ಗ್ರಾಮದ ಹಲವಾರು ಚಟುವಟಿಕೆಗಳಿಗೆ ಆರ್ಥಿಕ ಸಹಕಾರವನ್ನು ಶಿಶುವಿಹಾರ ಹಾಗೂ ಸರ್ಕಾರಿ ಶಾಲೆಗಳಿಗೆ ನೀಡಿರುವುದು ಶ್ಲಾಘನೀಯ ಎಂದರು.



## ನೂತನ ಶಾಖೆ ಉದ್ಘಾಟನೆ

ಚಿತ್ರದುರ್ಗದ ಶ್ರೀ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತದ ನೂತನ ಶಾಖಾ ಕಚೇರಿ ಉದ್ಘಾಟನೆ ಯಶಸ್ವಿಯಾಗಿ ನೆರವೇರಿತು. ನೂತನ ಶಾಖಾ ಕಚೇರಿಯ ಇ–ಸ್ಟಾಂಪಿಂಗನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಹಲವು ಗಣ್ಯರು ಉಪಸ್ಥಿತರಿದ್ದರು.

## ವಾರ್ಷಿಕ ಮಹಾಸಭೆ

ಉಡುಪಿಯ ಜನಹಿತ ಸೌಹಾರ್ದ ಸಹಕಾರಿಯಲ್ಲಿ 5ನೇ ಸಾಮಾನ್ಯ ಸಭೆ ಜರುಗಿತು. 2011–12ನೇ ಸಾಲಿಗೆ ಸದಸ್ಯರಿಗೆ ಶೇ.10 ಪಾಲುಮುನಾಫೆ ಘೋಷಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಗೋಪಾಲ್ ವಹಿಸಿದ್ದರು.




## 4ನೇ ಸಾಮಾನ್ಯ ಸಭೆ

ಬೀದರ್ ನಗರದ ಶ್ರೀನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ.,ದಲ್ಲಿ ಇತ್ತೀಚೆಗೆ ನಾಲ್ಕನೇ ಸಾಮಾನ್ಯ ಸಭೆ ಯಶಸ್ವಿಯಾಗಿ ನಡೆಯಿತು. ಸಹಕಾರಿಯು 2011–12ರ ವರದಿಯಂತೆ ದುಡಿಯುವ ಬಂಡವಾಳ ರೂ. 1523003.46 ಆಗಿರುತ್ತದೆ. ಒಟ್ಟು 67574.22ರೂ. ಆದಾಯವನ್ನು ಈ ಸಂದರ್ಭದಲ್ಲಿ ತಿಳಿಸಿದೆ.

## ದಿ ಪಾವಗಡ ಸೌಹಾರ್ದ ಪತ್ತಿನ ಸಹಕಾರಿಯ ಪ್ರಗತಿ ವರದಿ

- ಸದಸ್ಯತ್ವ : 8052
- ಷೇರು ಬಂಡವಾಳ : ರೂ.13941400/–
- ಠೇವಣಿಗಳು : 31.61 ಕೋಟಿ ರೂ.
- ಸಾಲ ಹಾಗೂ ಮುಂಗಡಗಳು : 36.15 ಕೋಟಿ ರೂ.
- ಲಾಭ : ಕಳೆದ ವರ್ಷ ರೂ. 12782699.98 ರೂಗಳ ನಿವ್ವಳ ಲಾಭಗಳಿಸಿದ್ದ ಸಹಕಾರಿ ಪ್ರಸಕ್ತ ಸಾಲಿನಲ್ಲಿರೂ. 19152244.26ಗಳ ಉತ್ತಮ ಲಾಭ ಗಳಿಸಿದೆ.
- ಅನುತ್ಪಾದಕ ಆಸ್ತಿ(ಎನ್‌ಪಿಎ) : ಈ ವರ್ಷ ನಮ್ಮ ಸಹಕಾರಿಯು ಎನ್ಪಿಎ. ಪ್ರಮಾಣ 1% ಗಳಾಗಿರುತ್ತದೆ. ನಮ್ಮೊಟ್ಟು ಸಾಲ 36.15 ಕೋಟಿ ಗಳಿಗೆ ಹೋಲಿಸಿದರೆ ನಮ್ಮ ಸಹಕಾರಿಯು ಪ್ರಗತಿಯಲ್ಲಿದೆ.

ಸದಸ್ಯರು, ನೌಕರರು ಮತ್ತು ಅವರ ಪತಿ/ಪತ್ನಿ/ಮಕ್ಕಳು 2011–12ನೇ ಸಾಲಿನ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆದವರಿಗೆ ಸಾಮನ್ಯ ಸಭೆಯಲ್ಲಿ ಉಡುಗೊರೆಯೊಂದಿಗೆ ಸನ್ಮಾನಿಸುವ ಕಾರ್ಯಕ್ರಮವನ್ನು ಪ್ರತಿವರ್ಷವು ಹಮ್ಮಿಕೊಳ್ಳಲಾಗುತ್ತಿದೆ. ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಗ್ರಾಮಾಂತರ ಶಾಲಾ ಮಕ್ಕಳಿಗೆ ಉಚಿತ ತಟ್ಟೆ ಲೋಟ ವಿತರಣೆ ಕ್ರೀಡೆಗಳಿಗೆ ಆರ್ಥಿಕ ಪ್ರೋತ್ಸಾಹ ಮುಂತಾದ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳುತ್ತಿದೆ.

# ಸೌಹಾರ್ದ ಸಹಕಾರಿ ಬೈಲಾ (ಉಪವಿಧಿಗಳು) ಒಂದು ಚಿಂತನೆ

▸▸ **ಶರಣಪ್ಪ ರೋಜಾ,** ನಿವೃತ್ತ ಸಹಾಯಕ ನಿಬಂಧಕರು, ಸಹಕಾರ ಸಂಘಗಳು, ಗುಲ್ಬರ್ಗಾ.

**ಬೈಲಾ (ಉಪವಿಧಿಗಳು) ಅಂದರೆ ಏನು? ಮತ್ತು ಇದಕ್ಕಿರುವ ವ್ಯಾಖ್ಯಾನ ಏನು? ಬೈಲಾ ಸೌಹಾರ್ದ ಸಹಕಾರಿ ಕಾಯ್ದೆಯಷ್ಟೇ ಸಶಕ್ತವಾಗಿದೆಯೇ? ಬೈಲಾ ಕೂಡಾ ಕಾಯ್ದೆಯೇ ಅದರಂತೆ ಪರಿಗಣಿಸಿ ನ್ಯಾಯಾಲಯ ಜಾರಿಕೊಡಬಹುದೇ?**

ಸಾಮಾನ್ಯವಾಗಿ ಯಾವುದೇ ಒಂದು ಸೌಹಾರ್ದ ಸಹಕಾರಿ ಬೈಲಾ (ಉಪವಿಧಿಗಳು) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಹಾಗೂ ಸೌಹಾರ್ದ ಸಹಕಾರಿ ನಿಯಮಗಳು 2004. ಅವಕಾಶಗಳ ಇತಿಮಿತಿಗಳ ಒಳಗೆ ರಚಿತವಾಗಿ ಸಹಕಾರ ಸಂಘಗಳ ನಿಬಂಧಕರಿಂದ ನೋಂದಣಿಯಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10ರಲ್ಲಿ ಬೈಲಾದಲ್ಲಿ ಇರಬೇಕಾದ ವಿಷಯಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಲಾಗಿದೆ.

ಆದರೆ ಬೈಲಾ (ಉಪವಿಧಿಗಳು ) ಅಂದರೆ ಏನು? ಮತ್ತು ಇದಕ್ಕಿರುವ ವ್ಯಾಖ್ಯಾನ ಏನು? ಬೈಲಾ ಸೌಹಾರ್ದ ಸಹಕಾರಿ ಕಾಯ್ದೆಯಷ್ಟೇ ಸಶಕ್ತವಾಗಿದೆಯೇ? ಬೈಲಾ ಕೂಡಾ ಕಾಯ್ದೆಯೇ ಅದರಂತೆ ಪರಿಗಣಿಸಿ ನ್ಯಾಯಾಲಯ ಜಾರಿಕೊಡಬಹುದೇ?

ಸೌಹಾದ್ ಸಹಕಾರಿಯೊಡನೆ ವ್ಯವಹರಿಸುತ್ತಿರುವ ಸದಸ್ಯರೇತರರಿಗೆ ಸಹಕಾರಿ ಬೈಲಾ ಕಟ್ಟುನಿಟ್ಟಾಗಿ ಅನ್ವಯಿಸುವುದೇ? ಮತ್ತು ಸದಸ್ಯತೇರರು ಬೈಲಾ ಅವಕಾಶಗಳಿಗೆ ಬಾಧ್ಯರೇ?

ಈ ರೀತಿ ಎದುರಾಗುವ ಹಲವಾರು ಪ್ರಶ್ನೆಗಳಿಗೆ ಸೌಹಾರ್ದ ಸಹಕಾರಿ ಅಧಿನಿಯಮ 1997ರಲ್ಲಾಗಲಿ/ 2004ರ ನಿಯಮಗಳಲ್ಲಾಗಲೀ ಉತ್ತರ ಇಲ್ಲದೇ ಇರುವುದು ಗಮನಿಸಬಹುದಾಗಿದೆ. ಈ ಎಲ್ಲಾ ಮೇಲಿನ ಪ್ರಶ್ನೆಗಳಿಗೆ ಈ ಕೆಳಗೆ ಉಲ್ಲೇಖಿಸಿದ ಕೆಲವೊಂದು ನ್ಯಾಯಾಲಯದ ಮಹತ್ತರ ತೀರ್ಪಿನ ಮೂಲಕ ಉತ್ತರ ದೊರಕಿಸಿಕೊಳ್ಳಬಹುದಾಗಿದೆ.




"A Bye-law of a Co-Operative Society is not law within article 13 of the constitution and the bye-law comparable to the articles of the association of a company or a friendly society is only a term of contract between a member of the society (1981) 2 KAR L.J.533 confirmed in WA 1109/81. Guruppa V/s South Central Railway Employees Consumer Co.-operative Society Ltd., and others 1983 (1) KAR L.J.106.

ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ಫುಲ್ ಬೆಂಚ ಶ್ರೀ ಕೋನಸಿಮಾ ಕೇಂದ್ರ ಸಹಕಾರ ಬ್ಯಾಂಕ್ ವಿರುದ್ಧ ಸೀತಾರಾಮ ರಾಜು ಪ್ರಕರಣದಲ್ಲಿ ಬೈಲಾ ಬಗ್ಗೆ ಈ ರೀತಿ ವಿವರಿಸಿದೆ.

"That the Bye-law of the society are a contract between the parties and bind both the parties"

ಕರ್ನಾಟಕ ಉಚ್ಚ ನ್ಯಾಯಾಲಯ (ಐ.ಎಲ್.ಆರ್ 2008 ಕೆ.ಎ.ಆರ್.2245) ಬಿನ್ನಿಮಿಲ್ ಕಾರ್ಮಿಕರ ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ವಿರುದ್ಧ ಡಿ.ಆರ್. ಮೃತ್ಯುಂಜಯ ಆರಾಧ್ಯ ಪ್ರಕರಣದಲ್ಲಿನ ತೀರ್ಪಿನ ವಿವರಣೆ ಹೀಗಿದೆ.

"Bye-laws only govern the internal management, business or administration of a society". They are in the nature of articles of association of a company incorporated under the company act. It has no statutory force. Any act of the society contrary to the said bye-law if so facto do not render the said act void and without authority when the society enters into contract with third parties or outsiders, those outsiders, those outsiders are in no way bound by the bye-law".

ಈ ಮೇಲಿನ ಉಲ್ಲೇಖಿತ ಮಹತ್ವದ ನ್ಯಾಯಾಲಯದ ತೀರ್ಪುಗಳಿಂದ ಬೈಲಾ ವ್ಯಾಖ್ಯಾನ ಎದುರಾದ ಇತರ ಪ್ರಶ್ನೆಗಳಿಗೆ ಉತ್ತರ ದೊರಕಿದ ಎಂಬ ಸಕಾರಾತ್ಮಕ ಅಭಿಪ್ರಾಯಕ್ಕೆ ಬರಬಹುದಾಗಿದೆ. ಹಾಗೂ ಸೌಹಾರ್ದ ಸಹಕಾರಿಗಳು ಸದಸ್ಯೇತರರೊಡನೆ ವ್ಯವಹರಿಸುವಾಗ ಮುನ್ನೆಚ್ಚರಿಕೆ ವಹಿಸುವುದು ಅವಶ್ಯಕ ಹಾಗೂ ಅನಿವಾರ್ಯ. ■



# ಪರಿಣಾಮಕಾರಿ ಸಂವಹನ





– ಬಿ.ಎ. ಮಹದೇವಪ್ಪ
ಅಪರ ನಿಬಂಧಕರು.

...ಹಿಂದಿನ ಸಂಚಿಕೆಯಿಂದ

ಸಂವಹನದ ಕುರಿತಂತೆ ಈಗಾಗಲೇ ಅನೇಕ ವಿಷಯಗಳ ಕುರಿತು ಅರಿತಿದ್ದೇವೆ. ಸಂವಹನ ಎಂದರೇನು, ಸಂವಹನದ ಬಗೆಗಳಾವುವು, ಸಂವಹನದ ಸಪ್ತ ಸೂತ್ರಗಳೇನು, ಮೌಖಿಕ ಸಂವಹನ, ಲಿಖಿತ ಸಂವಹನ ಹಾಗೂ ಶರೀರ ಭಾಷೆಗಳ ಕುರಿತಂತೆ ಹಿಂದಿನ ಸಂಚಿಕೆಗಳಲ್ಲಿ ಅರಿತಿದ್ದೇವೆ. ಸಂವಹನದ ಕುರಿತ ಇನ್ನೊಂದಿಷ್ಟು ವಿಷಯಗಳನ್ನ ಈ ಸಂಚಿಕೆಯಲ್ಲಿ ಅವಲೋಕಿಸೋಣ.

ನಗು : ಸಂವಹನದಲ್ಲಿ ಮುಖ್ಯ ವಿಧವಾದ ಶರೀರ ಭಾಷೆಯಲ್ಲಿ ಹಾಗೂ ಮೌಖಿಕ ಸಂವಹನದಲ್ಲಿ ಪ್ರಮುಖವಾದದ್ದು ನಗು. ಸಂವಹನದಲ್ಲಿ ಸೂಕ್ತ ಸಂದರ್ಭದಲ್ಲಿ ನಗುವನ್ನು ಬಳಸಿಕೊಂಡಾಗ ಸಂವಹನ ಸುಲಭವಾಗಿಯೂ, ಆಹ್ಲಾದಕರವಾಗಿಯೂ ಇರುತ್ತದೆ. ನಗುವಿನಿಂದ ಹೇಗೆ ವ್ಯಕ್ತಿತ್ವವನ್ನು ನಿರೂಪಿಸುತ್ತವೆ ಎನ್ನುವುದನ್ನು ಹೇಳುವ ಕೆಲವು ಹೇಳಿಕೆಗಳು ಹೀಗಿವೆ :

- ತನ್ನೊಳಗೆ ನಗುವವನು – ಜ್ಞಾನಿ
- ತನಗೆ ತಾನೆ ನಗುವವನು–ಹುಚ್ಚ
- ತನ್ನ ಗೆಳತಿಯನ್ನು ನೆನೆದು ನಗುವವನು– ಪ್ರೇಮಿ
- ತನ್ನನ್ನೇ ಮೈಮರೆತು ನಗುವವನು – ರಸಿಕ
- ಇನ್ನೊಬ್ಬರನ್ನು ನೋಡಿ ನಗುವವನು – ಗರ್ವಿ
- ಇನ್ನೊಬ್ಬರ ದುಸ್ಥಿತಿ ನೋಡಿ ನಗುವವನು– ಅಯೋಗ್ಯ
- ಇನ್ನೊಬ್ಬರಿಗೆ ನೋವುಂಟು ಮಾಡಿ ನಗುವವನು– ಖಳನಾಯಕ
- ನಗಿಸಿ ಮನರಂಜನೆ ನೀಡುವವನು – ವಿದೂಷಕ
- ನಗುತ್ತಲೇ ವಿಜಯ ಸಾಧಿಸುವವನು – ಬುದ್ಧಿವಂತ
- ಗೆದ್ದರೂ ನಗದವನು – ಕರ್ಮಯೋಗಿ

**ಶರೀರ ಭಾಷೆ :** ಕೆಲವು ಸಲ ನಮ್ಮ ಹಾವ–ಭಾವಗಳು ನಕಾರಾತ್ಮಕ ಅಭಿಪ್ರಾಯ ಮೂಡಿಸುತ್ತವೆ 'ನಮಸ್ಕಾರ' ಎಂದು ಕೈ ಜೋಡಿಸುವಾಗ ವ್ಯಂಗ್ಯ ನಗು ಇದ್ದರೆ, "ಹೇಗಿದ್ದೀರಿ" ಎಂದು ಮುಖ ಗಂಟಿಕ್ಕಿಕೊಂಡು ಪ್ರಶ್ನಿಸಿದರೆ, "ನಿಮ್ಮಿಂದ ಬಹಳ ಉಪಕಾರವಾಯಿತು" ಎಂದು ಕೆಂಗಣ್ಣು ಬೀರುತ್ತ ಹೇಳಿದರೆ ಸಂವಹನದ ಪರಿಣಾಮ ಬೇರೆ ರೀತಿಯಲ್ಲಿ ಆದೀತು. ಹಾಗೆಯೇ ಸಂವಹನದಲ್ಲಿ ಶರೀರ ಭಾಷೆಯೂ ಮುಖ್ಯವಾಗುತ್ತದೆ.

**ಕೆಲವು ಶರೀರ ಭಾಷೆಗಳ ಉದಾಹರಣೆಯನ್ನ ಗಮನಿಸಿ :**

ಕುಳಿತುಕೊಳ್ಳುವಿಕೆಯಲ್ಲಿ ಶರೀರ ಭಾಷೆಯ ಕೆಲವು ಉದಾಹರಣೆ – ಕುರ್ಚಿಯಲ್ಲಿ ನೆಟ್ಟಗೆ ಕುಳಿತರೆ–ಶಿಸ್ತು ಬದ್ಧತೆ, ಕೈಗಳನ್ನು ತಲೆಗೆ ಒತ್ತಿಕೊಂಡು ಹಿಂದಕ್ಕೆ ಕುಳಿತರೆ – ವಿಪರೀತ ಆತ್ಮವಿಶ್ವಾಸ, ಒರಗಿಕೊಂಡರೆ – ಇತರರ ಮೇಲೆ ಅಧಿಕಾರ ಭಾವ, ಮುಂದಕ್ಕೆ ಬಾಗಿ ಕುಳಿತರೆ – ಆಸಕ್ತಿ, ಕಾಲಮೇಲೆ ಕಾಲು ಹಾಕಿಕೊಂಡು ಕುಳಿತರೆ – ಧೈರ್ಯ/ಅಧಿಕಾರ ದರ್ಪ.

**ನಿಂತುಕೊಳ್ಳುವುದರಲ್ಲಿನ ಶರೀರ ಭಾಷೆ :** ಸೈನಿಕರ ರೀತಿಯಲ್ಲಿ ನಿಂತುಕೊಂಡರೆ–ಶಿಸ್ತು ಬದ್ಧತೆ & ಆತ್ಮವಿಶ್ವಾಸ, ಭುಜಗಳನ್ನು ಬಾಗಿಸಿ ಅಥವಾ ಸ್ವಲ್ಪ ಬೆನ್ನು ಬಾಗಿಸಿ ನಿಂತುಕೊಂಡರೆ – ಹೆದರಿಕೆ ಅಥವಾ ವಿಧೇಯತೆ, ಟೇಬಲ್ ಮೇಲೆ ಕೈಇಟ್ಟುಕೊಂಡು ಮುಂದೆ ಬಾಗಿದರೆ – ಅಧಿಕಾರ.

**ನಡೆಯುವಾಗ ಶರೀರ ಭಾಷೆ :** ಠೀವಿಯಿಂದ ನಡೆಯುವುದು – ಆತ್ಮವಿಶ್ವಾಸ, ಶತಪಥ ನಡಿಗೆ – ಆಲೋಚನೆ/ ಗೊಂದಲ, ಹೆಜ್ಜೆಯ ಮೇಲೆ ಹೆಜ್ಜೆ – ನಿಧಾನ ಮನೋಭಾವ.

**ಕೈಗಳಲ್ಲಿನ ಶರೀರ ಭಾಷೆಗೆ ಉದಾಹರಣೆ :** ಬೆರಳು ತೋರಿಸಿದರೆ ದಾರಿ ತೋರಿಸುವಿಕೆ/ಆಜ್ಞೆ ಮಾಡುವಿಕೆ, ಕೈಮುಷ್ಠಿ ಮಾಡಿ ಹೆಬ್ಬೆರಳನ್ನು ತೋರಿಸಿದರೆ – ಸವಾಲು, ಕೈಮುಷ್ಠಿ ಮಾಡಿ ಹೆಬ್ಬೆರಳನ್ನು ಕೆಳಗೆ ಬಾಗಿಸಿದರೆ – ಸೋಲು, ಮೇಲ್ಮುಖ ರೀತಿಯಲ್ಲಿ ಬೆರಳು ತೋರಿಸಿದರೆ – ಗೆಲುವು.

**ಷೇಕ್ ಹ್ಯಾಂಡ್ ಮಾಡುವಾಗಿನ ಶರೀರ ಭಾಷೆ :** ಹಸ್ತ ತಾಗಿಯೂ ತಾಗದ ಹಾಗೆ – ನಿರಾಸಕ್ತಿ, ಕೈಗಳು ತೇವವಿದ್ದರೆ – ದುರ್ಬಲ ವ್ಯಕ್ತಿತ್ವ, ಅಂಗೈ ನೇರವಾಗಿದ್ದರೆ – ಸಮಾನತೆ (ಸಹಕಾರ).



ಮುಂದಿನ ಸಂಚಿಕೆಗೆ...





ಹೇಮಾದ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಸಭೆ ಅಧ್ಯಕ್ಷತೆಯನ್ನು ಶ್ರೀ ಹೆಚ್.ಜೆ.ಎಂ. ಮಹಾಬಲ ಭಟ್ಟ ವಹಿಸಿದ್ದರು. ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸತೀಶ್ ಚಂದ್ರ ರವರು ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.



ಶಹಾಪುರದಲ್ಲಿ ಹೈದ್ರಾಬಾದ್ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ವಾರ್ಷಿಕ ಮಹಾಸಭೆ ದಿನಾಂಕ 09.09.2012 ರಂದು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಗುರುಲಿಂಗಪ್ಪ ಕಾಮಾ ರವರು ವಹಿಸಿದ್ದರು.



ಕುಂದಾಪುರ ವಂದೇ ಮಾತರಂ ಸಹಕಾರಿ ಸಂಘದ ಮಹಾಸಭೆ ಜರುಗಿತು. ಸುಮಾರು 5 ಲಕ್ಷ ಪಾಲು ಬಂಡವಾಳಹೊಂದಿದ್ದು, 60 ಲಕ್ಷ ರೂ. ಹೆಚ್ಚಿನ ಠೇವಣಿ ಸಂಗ್ರಹಿಸಿ ಸಾಲ ವಸೂಲಾತಿಯಲ್ಲಿ ನೂರಕ್ಕೆ ನೂರು ಸಾಧನೆ ಮಾಡಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ವಿನಯ ಎ.ಪಾಯಸ್ ತಿಳಿಸಿದರು.





ಉತ್ತರ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಿತ : 2011-12ರ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 2 ಸೆಪ್ಟಂಬರ್ 2012 ರಂದು ಹಳೆ ಹುಬ್ಬಳ್ಳಿಯ ಎಸ್.ಎಸ್.ಕೆ. ಕಲ್ಯಾಣ ಮಂಟಪದಲ್ಲಿ ಶ್ರೀ ಗೈಬುಸಾಬ ಹೊನ್ನಾಳರವರ ಅಧ್ಯಕ್ಷತೆಯಲ್ಲಿ ಜರುಗಿತು.

# 2 ಮತ್ತು 3ನೇ ತಂಡಗಳ ಸೌಹಾರ್ದ ಸಹಕಾರಿ

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ತನ್ನ ಕಾರ್ಯಚಟುವಟಿಕೆಯನ್ನು ಉತ್ತಮವಾದ ಸೇವೆ ಮತ್ತು ಸದಸ್ಯರ ಅರ್ಥಿಕ ಸಭಲರನ್ನಾಗಿಸುವ ಪ್ರಯತ್ನ ಅಭಿನಂದನಾರ್ಹವಾಗಿದೆ ಎಂದು ವಿಧಾನಪರಿಷತ್ ಸದಸ್ಯರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರು ಆಗಿರುವ ಶ್ರೀ ಅರುಣ್ ಶಹಾಪುರ ಅವರು ಅಭಿಪ್ರಾಯಿಸಿದರು.

ಬೆಂಗಳೂರಿನ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಸಹಯೋಗದಲ್ಲಿ ಸೆ.7 ಮತ್ತು 8ರಂದು ನಡೆದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ "ಆಡಳಿತ ಪರಿಣತಿ ತರಬೇತಿ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಸೌಹಾರ್ದ ಸಹಕಾರಿಗಳ ನೋಂದಣಿ ಬಹಳ ವೇಗವಾಗಿ ಸಾಗುತ್ತಿದ್ದು, ಸಹಕಾರಿ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳು ಬಲ ತಂದುಕೊಡುತ್ತಿದೆ. ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯ ನಿರ್ವಹಣೆಯಲ್ಲಿ ನಿರ್ದೇಶಕರ ಪಾತ್ರ ಬಹಳಷ್ಟು ಮಹತ್ವದ್ದು. ಆಡಳಿತ ನಿರ್ವಹಣೆಯಲ್ಲಿ ನಿರ್ದೇಶಕರು ಪರಿಣತಿ ಸಾಧಿಸುವುದು ಅವಶ್ಯಕ. ಸಂಯುಕ್ತ ಸಹಕಾರಿಯವರು ಉತ್ತಮ ವಿಷಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮಾಡಿದ್ದಾರೆ. ಇದೊಂದು ಉತ್ತಮ ಗುಣಮಟ್ಟದ ತರಬೇತಿ ಕಾರ್ಯಕ್ರಮ ಮುಂದಿನ ದಿನಗಳಲ್ಲಿ ಸಂಯುಕ್ತ ಸಹಕಾರಿ ಇನ್ನೂ ಉತ್ತಮ ವಿಷಯಗಳ ಬಗ್ಗೆ ತರಬೇತಿಯನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ವಹಿಸಿದ್ದರು. ಬೆಂಗಳೂರು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ಎಸ್.ಎ. ಸಿದ್ಧಾಂತಿ, ಬೆಂಗಳೂರು ಆಡಳಿತ ಮತ್ತು ಅಭಿವೃದ್ಧಿ ವಿಭಾಗದ ಅಪರ ನಿಬಂಧಕ ಶ್ರೀ ಎನ್. ನಾರಾಯಣಪ್ಪ ಮುಖ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರತಿನಿಧಿಗಳು ಹಾಗೂ ತರಬೇತಿಯ ಉದ್ದೇಶಗಳನ್ನು ಕುರಿತು ಮಾತನಾಡಿದರು.




ಸೆ.7ರಂದು ನಡೆದ ತರಬೇತಿ ಕಾರ್ಯಕ್ರಮದಲ್ಲಿ ಬೆಂಗಳೂರು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ಎಸ್.ಎ. ಸಿದ್ಧಾಂತಿ ರವರು ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು, ಸವಾಲುಗಳು–ಅವಕಾಶಗಳು ವಿಷಯದ ಬಗ್ಗೆ ಉಪನ್ಯಾಸದಲ್ಲಿ ಸಹಕಾರ ಕ್ಷೇತ್ರದ ಪರಿಚಯ, ವಿದೇಶದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ ಮತ್ತು ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಬೆಳವಣಿಗೆಯ ಬಗ್ಗೆ ಸವಿವರವಾಗಿ ವಿವರಿಸಿ, ದೇಶದಲ್ಲಿ ಸಹಕಾರ ಕ್ಷೇತ್ರಕ್ಕೆ ಅಡಿಪಾಯ ಹಾಕಿರುವ ಹೈನೋದ್ಯಮ ಕ್ಷೇತ್ರದ ಪಿತಾಮಹಾ ಡಾ|| ವಿ. ಕುರಿಯನ್ ರವರ ಸಾಧನೆಗಳನ್ನು ವಿವರಿಸಿ ಕರ್ನಾಟಕದಲ್ಲಿ ಸಹಕಾರ ಸಂಘದ ಹುಟ್ಟು ಮತ್ತು ಬೆಳವಣಿಗೆ ಬಗ್ಗೆ ವಿವರಿಸಿದರು.

25 ಸೌಹಾರ್ದ ಸಹಕಾರಿಗಳಿಂದ 54 ಜನ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಮತ್ತು ತರಬೇತಿಯಿಂದ ಪಡೆದಿರುವ ವಿಷಯಗಳನ್ನು ಜ್ಞಾನವನ್ನು ತಮ್ಮ ಸಹಕಾರಿಯಲ್ಲಿ ಕಾರ್ಯಗತ ಗೊಳಿಸುವುದಾಗಿ ತಿಳಿಸಿದರು.

– ವರದಿ: ಪಾಲ್‌ರಾಜ್ ಎ.

## ಗುರುವಾಯನಕೆರೆಯಲ್ಲಿ ಸೌಹಾರ್ದ ಸಹಕಾರಿ ಸಿಬ್ಬಂಧಿಗಳಿಗಾಗಿ ವ್ಯಕ್ತಿತ್ವ ವಿಕಸನದ 8ನೇ ತಂಡದ ತರಬೇತಿ ಕಾರ್ಯಕ್ರಮ

ದಕ್ಷಿಣ ಕನ್ನಡ ಜಿಲ್ಲೆ ಗುರುವಾಯನಕೆರೆ ನಾಗರೀಕ ಸೇವಾ ಟ್ರಸ್ಟ್‌ನಲ್ಲಿ ಡಿ.1 ರಿಂದ 10ರವರೆಗೆ 8ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಿಂದ ಮಂಗಳೂರಿಗೆ ಹೋಗುವ ದಾರಿಯಲ್ಲಿ 20 ಕೀ.ಮೀ. ದೂರದಲ್ಲಿರುವ ನಾಗರೀಕ ಸೇವಾ ಟ್ರಸ್ಟ್ ಗುರುವಾಯನಕೆರೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಾರಿ ಸಿಬ್ಬಂದಿಯವರು ಕೂಡಲೇ ತಮ್ಮ ಹೆಸರು ವಿವರಗಳನ್ನು ಪ್ರವೇಶ ಶುಲ್ಕ ರೂ.5,000/–ಕಳುಹಿಸಿ ನೋಂದಾಯಿಸಿಕೊಳ್ಳಲು ಸೂಚಿ ಸಿದೆ. ಭಾಗಹವಹಿಸುವ ಪ್ರತಿನಿಧಿಗಳ ಸಂಖ್ಯೆ 50 ಮಾತ್ರ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ನೋಂದಾವಣೆಗೆ ಕೊನೆಯ ದಿನಾಂಕ 17/11/2012.

# ನಿರ್ದೇಶಕರುಗಳಿಗಾಗಿ 'ಆಡಳಿತ ಪರಿಣತಿ ತರಬೇತಿ'



**3ನೇ ತಂಡದ ಕಾರ್ಯಕ್ರಮದ ವರದಿ :**

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸಹಕಾರಿಗಳ ನೋಂದಣಿ ಬಹಳ ವೇಗವಾಗಿ ಸಾಗುತ್ತಿರುವುದು ಸಹಕಾರಿ ಕ್ಷೇತ್ರಕ್ಕೆ ಬಲ ತಂದಂತಾಗಿದೆ ಇದೊಂದು ಸಂತೋಷದ ವಿಷಯವಾಗಿದೆ ಎಂದು ಬೆಂಗಳೂರು ಜಂಟಿ ನಿಬಂಧಕರಾದ (ಕಾನೂನು ಕೋಶ ವಿಭಾಗ) ಶ್ರೀ ಹೆಚ್. ಎಸ್. ನಾಗರಾಜಯ್ಯ ಹರ್ಷವ್ಯಕ್ತಪಡಿಸಿದರು.

ಬೆಂಗಳೂರಿನ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಸಹಯೋಗದಲ್ಲಿ ಸೆ.16 ಮತ್ತು 17 ರಂದು ನಡೆದ ಸೌಹಾರ್ದ ಸಹಕಾರಿಗಳ ನಿರ್ದೇಶಕರು ಗಳಿಗೆ "ಆಡಳಿತ ಪರಿಣತಿ ತರಬೇತಿ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯ ನಿರ್ವಹಣೆಯಲ್ಲಿ ನಿರ್ದೇಶಕರ ಪಾತ್ರ ಬಹಳಷ್ಟು ಮಹತ್ವದ್ದು. ಆಡಳಿತ ನಿರ್ವಹಣೆಯಲ್ಲಿ ನಿರ್ದೇಶಕರು ಪರಿಣತಿ ಸಾಧಿಸುವುದು ಅವಶ್ಯಕ. ಸಂಯುಕ್ತ ಸಹಕಾರಿಯವರು ಉತ್ತಮ ವಿಷಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮಾಡಿದ್ದಾರೆ. ಇದೊಂದು ಗುಣಮಟ್ಟದ ತರಬೇತಿ ಕಾರ್ಯಕ್ರಮ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್ಚಂದ್ರ ವಹಿಸಿದ್ದರು. ಬೆಂಗಳೂರು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ಎಸ್.ಎ. ಸಿದ್ಧಾಂತಿ, ನಿರ್ದೇಶಕರಾದ ಶ್ರೀಮತಿ ಹೆಚ್.ಸಿ. ನಾಗರತ್ನ ರವರು ಪಾಲ್ಗೊಂಡು ಮಾತನಾಡುತ್ತ ಸೌಹಾರ್ದ ಸಹಕಾರ ಸಂಸ್ಥೆಗಳು ಪಾರದರ್ಶಕ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಯ ಮೂಲಕ ಮಾದರಿ ಸಂಸ್ಥೆಗಳಾಗಿ ಬೆಳೆದು ಸೌಹಾರ್ದ ಸಹಕಾರ ಕ್ಷೇತ್ರವನ್ನು ಪ್ರಚುರಪಡಿಸುವ ಅಗತ್ಯತೆಯನ್ನು ತಿಳಿಸಿದರು.

ಈ ತರಬೇತಿ ಕಾರ್ಯಕ್ರಮಗಳಲ್ಲಿ ಮೊದಲನೆ ದಿನ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ. ಎಸ್. ಎ. ಸಿದ್ದಾಂತಿ ರವರು ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು, ಸವಾಲುಗಳು–ಅವಕಾಶಗಳು ವಿಷಯದ ಬಗ್ಗೆ ಉಪನ್ಯಾಸ ಹಾಗೂ ಶ್ರೀ. ನಂದೀಶ ಹಿರೇಮಠ ಕಾರ್ಪೋರೇಟ್ ಟ್ರೇನರ್ ಬೆಂಗಳೂರು ಇವರು ಆಡಳಿತದಲ್ಲಿ ಪರಿಣಿತಿ ಸಾಧನೆಯ ವಿವಿಧ ಹಂತಗಳು ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು.

ಎರಡನೇ ದಿನ ಮೈಸೂರಿನ ಅಪರ ನಿಬಂಧಕರಾದ ಶ್ರೀ ಸಿ. ಎನ್. ಪರಶಿವಮೂರ್ತಿ ರವರು ಸಹಕಾರ ಕ್ಷೇತ್ರದ ಕುರಿತು ಸಂವಿಧಾನದ ಇತ್ತೀಚಿನ ತಿದ್ದುಪಡಿ ಇದರ ಬಗ್ಗೆ ಉಪನ್ಯಾಸ, ಶ್ರೀ ಸುಭಾಷ ಹೆಗಡೆ, ಕಾರ್ಪೋರೇಟ್ ಟ್ರೈನರ್ ಸಾಗರ ಇವರು ಪ್ಲ್ಯಾನಿಂಗ್ ಮತ್ತು ಬಿಜಿನೆಸ್ ಡೆವೆಲಪಮೆಂಟ್ ಈ ವಿಷಯದ ಬಗ್ಗೆ ಉಪನ್ಯಾಸ ಹಾಗೂ ಶ್ರೀ. ಬಿ.ಎ. ಮಹದೇವಪ್ಪ ಅಪರ ನಿಬಂಧಕರು ಇವರು ಗುಣಮಟ್ಟ ನಿರ್ವಹಣೆಯಲ್ಲಿ ನಿರ್ದೇಶಕರುಗಳ ಪಾತ್ರ ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು.

ಈ ತರಬೇತಿಯಲ್ಲಿ 25 ಸೌಹಾರ್ದ ಸಹಕಾರಿಗಳಿಂದ 47 ಜನ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು. ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್. ಸಿ. ನಾಗರತ್ನರವರು ವಂದನಾರ್ಪಣೆ ಸಲ್ಲಿಸಿದರು.

**ವರದಿ – ಸಂತೋಷ ಬಸಣ್ಣವರ.**

